ಜಪ್ತುಪಡಿಸಿಕೊಂಡ ವಾಹನ KA-19-P-1680 ಮಾರುತಿ ಓಮಿನಿ ವ್ಯಾನ್ ಇದರ ನೊಂದಾಣಿ ಮಾಲೀಕರೆಂದು ಹೇಳಿಕೊಂಡ ಶ್ರೀ.ಕ್ಲಾಡಿ ಡಿಸೋಜ, ಬಿನ್:ಜಾನ್ ಬ್ಯಾಪ್ಟಿಸ್ಟ್ ಡಿಸೋಜ, ರಾಯ್‌ಕಟ್ಟೆ ಹೌಸ್, ಪಡುಕೋಡಿ ಗ್ರಾಮ, ಮಂಗಳೂರು ತಾಲೂಕು ಇವರು ತಮ್ಮ ವಕೀಲರ ಮೂಲಕ ವಾಹನದ ಮೂಲ ಬಿ ಎಕ್ಸ್ ಟ್ರಾಕ್ಟ್‌ಯೊಂದಿಗೆ ದಿನಾಂಕ:22–2–2007ರಂದು ಅರ್ಜಿ ಸಲ್ಲಿಸಿ, ವಾಹನದ ಮಧ್ಯಂತರ ಬಿಡುಗಡೆಗಾಗಿ ಕೋರಿರುತ್ತಾರೆ. ಸದ್ರಿಯವರ ಅರ್ಜಿಯ ವಿಚಾರಣೆ ಕೈಗೊಂಡು ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇಐಬಿ, ದ.ಕ. ಜಿಲ್ಲೆ, ಮಂಗಳೂರು ಇವರ ಪ್ರಾಧಿಕಾರದಿಂದ ದಿನಾಂಕ: 26–9–2007ರಂದು ಹೊರಡಿಸಿದ ಆದೇಶದಲ್ಲಿ ವಾಹನದ ಮಾಲೀಕರ ಮನವಿಯನ್ನು ಪುರಸ್ಕರಿಸಿ ವಾಹನ ಸಂ:KA-19-P-1680 ಮಾರುತಿ ೋಮಿನಿ ವ್ಯಾನಿಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ದ.ಕ. ಜಿಲ್ಲೆ ಮಂಗಳೂರು ಇವರು ನೀಡಿದ ಮೌಲ್ಯ ಮಾಪನ ವರದಿಯಲ್ಲಿ ನಮೂದಿಸಿರುವ ಮೌಲ್ಯದಂತೆ ರೂ.1,05,000/– ಮೊತ್ತದ ಬ್ಯಾಂಕ್ ಗ್ಯಾರೆಂಟಿ ಒದಗಿಸುವ ಹಾಗೂ ಇತರೆ ಷರತ್ತುಗಳಿಗೆ ಅನುಗುಣವಾಗಿ ಮಧ್ಯಂತರ ಬಿಡುಗಡೆಗೊಳಿಸಿ ಆದೇಶಿಸಲಾಗಿರುತ್ತದೆ.ಸದ್ರಿ ಆದೇಶವನ್ನು ಅನುಸರಿಸಿ ವಾಹನವನ್ನು ದಿನಾಂಕ:23–10–2007ರಂದು ವಾಹನದ ಮಾಲೀಕರ ಸುಪರ್ಧಿಗೆ ಮಧ್ಯಂತರ ಬಿಡುಗಡೆಗೊಳಿಸಲಾಗಿರುತ್ತದೆ. ವಾಹನದ ಮಾಲೀಕರು ಮಧ್ಯಂತರ ಬಿಡುಗಡೆ ಪಡೆದುಕೊಂಡ ಸಂದರ್ಭದಲ್ಲಿ ಭದ್ರತೆಯಾಗಿ ನೀಡಿರುವ ಬ್ಯಾಂಕ್ ಗ್ಯಾರೆಂಟಿಯ ಮಾನ್ಯತೆ ಅವಧಿಯನ್ನು ಕಾಲಕಾಲಕ್ಕೆ ನವೀಕರಿಸಿದ್ದು, ಪ್ರಸ್ತುತ ಮಾನ್ಯತೆ ಅವಧಿಯು ದಿನಾಂಕ:6–10–2010 ರವರೆಗೆ ಊರ್ಜಿತದಲ್ಲಿರುತ್ತದೆ.

ನಂತರ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಿ ಪ್ರಕರಣದ ಪಿರ್ಯಾದುದಾರರು ಹಾಗೂ ತನಿಖಾಧಿಕಾರಿಗಳಾದ ಶ್ರೀ ವಿನೋದ್ ಕುಮಾರ್, ಅಬಕಾರಿ ಉಪ ನಿರೀಕ್ಷಕರು ಮತ್ತು ಪಂಚ ಸಾಕ್ಷಿದಾರರಾದ ಶ್ರೀ.ಲಲಿತ ರಾವ್ ಇವರುಗಳು ಪ್ರಾಸಿಕ್ಯೂಶನ್ ಸಾಕ್ಷಿದಾರರಾಗಿ ಹಾಗೂ ಪ್ರಕರಣದಲ್ಲಿ ರಕ್ಷಣಾ ಸಾಕ್ಷಿದಾರರಾದ ಶ್ರೀ. ಕ್ಲಾಡಿ ಡಿಸೋಜಾ ಇವರು ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸಾಕ್ಷ್ಯವನ್ನು ನೀಡಿರುತ್ತಾರೆ.

ಅಭಿಯೋಗದ ಪರ ಸಾಕ್ಷಿ ಹಾಗೂ ರಕ್ಷಣಾ ಪರ ರಕ್ಷಣಾ ಸಾಕ್ಷಿ ವಿಚಾರಣೆಯನ್ನು ನಡೆಸಿ, ಅಭಿಯೋಗದ ಪರ ವಾದ ಆಲಿಸಿ, ಪ್ರಾಧಿಕಾರಕ್ಕೆ ಸಲ್ಲಿಸಿರುವ ದಾಖಲಾತಿಗಳು, ಪ್ರಾಸಿಕ್ಯೂಶನ್ ಪರ ನೀಡಿರುವ ಸಾಕ್ಷಿಗಳ ಹೇಳಿಕೆಗಳನ್ನು ಪರಿಶೀಲಿಸಿ ಮುಂದಿನ ಆದೇಶ ಹೊರಡಿಸುವ ಮುನ್ನ ಈ ಕೆಳಕಂಡ ವಿವಾದಾಂಶಗಳಿಗೆ ಉತ್ತರವನ್ನು ಪಡೆಯಬೇಕಾಗಿರುತ್ತದೆ.

ವಿವಾದಾಂಶಗಳು

1) ದಿನಾಂಕ:03–11–2006 ರಂದು KA-19-P-1680 ಮಾರುತಿ ಒಮಿನಿ ವ್ಯಾನ್ ಇದರಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿಯನ್ನು ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಅಪರಾಧಕ್ಕೆ ಬಳಸಲಾಗಿದೆಯೇ?

2) ವಶಪಡಿಸಿಕೊಂಡಿರುವ ವಾಹನದ ಮಾಲೀಕರು ತಾನೆಂದು, ತನಗೆ ತಿಳಿಯದೇ ಕರ್ನಾಟಕ ಅಬಕಾರಿ ಕಾಯಿದೆಯಡಿ ಅಕ್ರಮ ಸಾರಾಯಿ ಸ್ಯಾಚೇಟು ಸಾಗಾಣಿಕೆಗೆ ವಾಹನವನ್ನು ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ವಾಹನದ ಮಾಲೀಕರು ಸಾಬೀತು ಪಡಿಸಿದ್ದಾರೆಯೇ? ಅಥವಾ ಇಲ್ಲವೇ?

3) ಜಪ್ತು ಪಡಿಸಲಾಗಿರುವ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ–1:

ಶ್ರೀ ವಿನೋದ್ ಕುಮಾರ್, ಅಬಕಾರಿ ಉಪ ನಿರೀಕ್ಷಕರು, ಮಂಗಳೂರು ಉತ್ತರ ವಲಯ–1 ಇವರು ದಿನಾಂಕ: 03–12–2009ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ. ಕಳೆದ ನಾಲ್ಕು ವರ್ಷಗಳಿಂದ ಅಬಕಾರಿ ಉಪ ನಿರೀಕ್ಷಕನಾಗಿ ಮಂಗಳೂರು ಉತ್ತರ ವಲಯ–1 ಇಲ್ಲಿ ಕೆಲಸ ನಿರ್ವಹಿಸುತ್ತಿದ್ದೆನು. ದಿನಾಂಕ:3–11–2006ರಂದು ಅಬಕಾರಿ ಜಂಟಿ ಆಯುಕ್ತರು, ಮಂಗಳೂರು ವಿಭಾಗ ಇವರ ವಿಶೇಷ ತನಿಖಾ ತಂಡದಲ್ಲಿ ಅಬಕಾರಿ ಉಪ ನಿರೀಕ್ಷಕನಾಗಿ ಕರ್ತವ್ಯ ಕೈಗೊಂಡ ಸಮಯದಲ್ಲಿ ಮಂಗಳೂರು ತಾಲೂಕಿನ ಕೂಳೂರು ಎಂಬಲ್ಲಿ ವಾಹನ ತಪಾಸಣೆ ಸಂದರ್ಭದಲ್ಲಿ ಮಂಗಳೂರಿನಿಂದ ಕೂಳೂರು ಕಡೆಗೆ ವೇಗವಾಗಿ ಬರುತ್ತಿದ್ದ ಮಾರುತಿ ಒಮ್ನಿ ಕಾರನ್ನು ನಿಲ್ಲಿಸಲಾಗಿ, ಸುಮಾರು 50 ಗಜ ದೂರದಲ್ಲಿ ಹೋಗಿ ನಿಲ್ಲಿಸಿ ಅದರಲ್ಲಿದ್ದ ಚಾಲಕನು ಓಡಿ ಹೋಗಲು ಯತ್ನಿಸಿದಾಗ ಕೂಡಲೇ ನಮ್ಮ ಸಿಬ್ಬಂದಿಗಳು ಅವನನ್ನು ಸುತ್ತುವರಿದು ಹಿಡಿದರು. ವಾಹನದಲ್ಲಿ ಆರೋಪಿ ಚಾಲಕನಾಗಿದ್ದ ವ್ಯಕ್ತಿಯಲ್ಲಿ ಅದರಲ್ಲಿ ಏನಿದೆ ಎಂದು ವಿಚಾರಿಸಿದಾಗ ಅವನು ಸಂಶಯಾಸ್ಪದವಾಗಿ ವರ್ತಿಸಿದ. ನ್ಯಾಯಾಲಯದಿಂದ ಸರ್ಚ್ ವಾರೆಂಟ್ ಪಡೆಯಲು ಕಾಲಾವಕಾಶ ಇಲ್ಲದ ಕಾರಣ ಸರ್ಚ್ ಮೆಮೊವನ್ನು ತಯಾರಿಸಿ ಸ್ಥಳದಲ್ಲಿದ್ದ ಇಬ್ಬರು ವ್ಯಕ್ತಿಗಳನ್ನು ಪಂಚರನ್ನಾಗಿ ಕರೆದುಕೊಂಡು ವಾಹನವನ್ನು ತಪಾಸಣೆ ಮಾಡಲಾಗಿ ವಾಹನದ ಒಳಗಡೆ ಸೀಟಿನ ಹಿಂಬದಿಯಲ್ಲಿ 9 ರಬ್ಬರ್ ಟ್ಯೂಬ್‌ಗಳಲ್ಲಿ ಕಳ್ಳಭಟ್ಟಿ ಸಾರಾಯಿ ಇರುವುದು ಗೊತ್ತಾಯಿತು. ಪ್ರತಿ ರಬ್ಬರ್ ಟ್ಯೂಬ್ ಗಳಲ್ಲಿ ಕಳ್ಳಭಟ್ಟಿ ಸಾರಾಯಿ ಇರುವುದೆಂದು ಗೊತ್ತಾಯಿತು. ಪ್ರತಿ ರಬ್ಬರ್ ಟ್ಯೂಬ್ ನಲ್ಲಿ 60 ಲೀ ನಂತೆ ಒಟ್ಟು 540 ಕಳ್ಳಭಟ್ಟಿ ಸಾರಾಯಿ ಇರುವುದು ಪತ್ತೆಯಾಯಿತು. ಆರೋಪಿಯಲ್ಲಿ ರಹದಾರಿ ಪತ್ರ ಇದೆಯೋ ಎಂದು ವಿಚಾರಿಸಲಾಗಿ ಯಾವುದೂ ಇಲ್ಲವೆಂದು ತಿಳಿಸಿದನು. ವಾಹನದ ನಂಬರನ್ನು ಪರಿಶೀಲಿಸಿ ಅದು ಸಂ:KA-19-P-1680 ಆಗಿರುವುದು, ಆರೋಪಿಯ ಹೆಸರು ವಿಳಾಸ ವಿಚಾರಿಸಲಾಗಿ ಕ್ಲಾಡಿ ಡಿಸೋಜಾ ಎಂದು ತಿಳಿಸಿದ. ಪ್ರತಿಯೊಂದು ಟ್ಯೂಬ್‌ನಿಂದ 750 ಎಂಎಲ್ ನಂತೆ 9 ಟ್ಯೂಬ್‌ಗಳಿಂದ 9 ಬಾಟಲಿಗಳಲ್ಲಿ ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆಯಲಾಯಿತು. ಬಾಟ್ಲಿಗಳ ಬಾಯಿಗೆ ಮತ್ತು ಟ್ಯೂಬ್‌ಗಳಿಗೆ ಬಟ್ಟೆ ಕಟ್ಟಿ ದಾರದಿಂದ ಸುತ್ತಿ ಇಲಾಖಾ ಸೀಲಿನಿಂದ ಸೀಲು ಮಾಡಲಾಯಿತು. ನಂತರ ಮಾದರಿ ಸೀಲನ್ನು ತಯಾರಿಸಲಾಯಿತು. ಸ್ಥಳದಲ್ಲಿ ಪಂಚರ ಸಮಕ್ಷಮ ಮಹಜರು ತಯಾರಿಸಿ ಅದನ್ನು ನಿಶಾನೆ ಪಿ–1 ಎಂದು ಗುರುತಿಸಲಾಯಿತು. ನಂತರ ಆರೋಪಿ ಮತ್ತು ಸೊತ್ತುಗಳೊಂದಿಗೆ ಕಛೇರಿಗೆ ಬಂದು ಪ್ರ.ಮಾ.ವರದಿಯನ್ನು ತಯಾರಿಸಿದೆನು. ಆರೋಪಿ ಮತ್ತು ಪ್ರ.ಮಾವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಒಪ್ಪಿಸಿರುತ್ತೇನೆ. ಪ್ರ.ಮಾ. ವರದಿಯನ್ನು ಗುರುತಿಸಿ ನಿಶಾನೆ ಪಿ–2 ಎಂದು ಅದರ ಮೇಲಿನ ಸಹಿಯನ್ನು ನಿಶಾನೆ ಪಿ–2ಎ ಎಂದು ಗುರುತಿಸಲಾಯಿತು. ಮಾದರಿ ಮದ್ಯದ ಬಾಟಲಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ದಿನಾಂಕ:10–11–06ರಂದು ಶ್ರೀ.ಉಮೇಶ್, ಅ.ರ. ಮುಖಾಂತರ ಕಳುಹಿಸಿಕೊಟ್ಟು, ದಿನಾಂಕ: 26–11–2006 ರಂದು ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಪಡೆದುಕೊಂಡಿರುತ್ತೇನೆ. ಅದನ್ನು ನಿಶಾನೆ ಪಿ–3 ಎಂದು ಗುರುತಿಸಿರುತ್ತೇನೆ. ವಾಹನದ ಬಗ್ಗೆ ಬಿ ಎಕ್ಸ್‌ಟ್ರಾಕ್ಟ್ ವರದಿಯನ್ನು ಪ್ರಾ.ಸಾ ಅ ರವರಿಂದ ಪಡೆದುಕೊಂಡಿರುತ್ತೇನೆ. ಇದನ್ನು

ನಿಶಾನೆ ಪಿ–4 ಎಂದು ಗುರುತಿಸಲಾಯಿತು. ನಿಶಾನೆ ಪಿ–3 ರ ವರದಿಯಲ್ಲಿ ಮಾದರಿಗಳಲ್ಲಿ ಶೇಕಡಾ 28 ರಷ್ಟು ಮದ್ಯಸಾರ ಅಂಶವಿರುವುದು ಎಂದು ದೃಡೀಕರಿಸಿರುತ್ತದೆ. ದಿನಾಂಕ:9–12–2006 ರಂದು ಈ ನ್ಯಾಯಾಲಯಕ್ಕೆ ತನಿಖಾ ವರದಿಯನ್ನು ಸಲ್ಲಿಸಿರುತ್ತೇನೆ. ಅದನ್ನು ನಿಶಾನೆ ಪಿ–5 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–5 ಎ ಎಂದು ಗುರುತಿಸಲಾಯಿತು. ಈ ಪ್ರಕರಣದಲ್ಲಿ ಅಮಾನತುಪಡಿಸಿಕೊಂಡ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. (ಅರ್ಜಿದಾರರು ವಾಹನವನ್ನು ಮಧ್ಯಂತರ ಸುಪರ್ದಿಗೆ ಪಡೆದುಕೊಂಡಿದ್ದು ಅದನ್ನು ಈ ದಿನ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತಾರೆ. ಅದನ್ನು ಮುದ್ದೆ ಮಾಲು–1 ಎಂದು ಗುರುತಿಸಲಾಯಿತು.

ಪಾಟೀ ಸವಾಲು: ರಕ್ಷಣಾ ಪರ ವಕೀಲರಾದ ಶ್ರೀ.ಕಾರ್ತಿಕ್ ಆರ್.ಉಡುಪ ಇವರ ಪಾಟೀ ಸವಾಲಿಗೆ ಸಾಕ್ಷಿದಾರರು ಉತ್ತರಿಸುತ್ತಾ ನಾನು ನನ್ನ ಕಛೇರಿಯಿಂದ ರಾತ್ರಿ 8–00 ಗಂಟೆಗೆ ಹೊರಟಿರುತ್ತೇನೆ. ನಾನು ಜಪ್ತು ವಾಹನವನ್ನು ಹೊರತುಪಡಿಸಿ ಸುಮಾರು 6 ರಿಂದ 7 ಇತರೆ ವಾಹನಗಳ ತಪಾಸಣೆ ಮಾಡಿರುತ್ತೇನೆ. ನಾನು ಜಪ್ತು ಪಡಿಸಿರುವ ವಾಹನವು ಆ ದಿನ ಮಂಗಳೂರು ಕಡೆಯಿಂದ ಕೂಳೂರಿನ ಕಡೆ ಹೋಗುತ್ತಿತ್ತು. ನಾನು ಆ ಸಮಯಕ್ಕೆ ಕೊಟ್ಟಾರ ಚೌಕಿ ಜಂಕ್ಷನ್ ಎಂಬಲ್ಲಿ ತಪಾಸಣೆಗೆ ನಿಂತಿದ್ದೆ. ನಾನು ವಾಹನವನ್ನು ಜಪ್ತುಪಡಿಸಿದ ಪೂರ್ವದಲ್ಲಿ ಅರ್ಧ ಗಂಟೆ ಮುಂಚಿತವಾಗಿ ಆ ಸ್ಥಳದಲ್ಲಿದ್ದೆನು. ನಾನು ತಪಾಸಣೆ ನಡೆಸಿದ ಸ್ಥಳ ಕೊಟ್ಟಾರ ಚೌಕಿ ಎಂಬುದು ರಾಷ್ಟ್ರೀಯ ಹೆದ್ದಾರಿ 17ರ ಕೊಟ್ಟಾರ ಆಗಿದ್ದು, ಸಾಕಷ್ಟು ಜನ ಸಂಚಾರ ಇದೆ. ನಾವು ಅಪರಾಧ ಸ್ಥಳಕ್ಕೆ ತಲುಪಿ ಸುಮಾರು 10–30 ಗಂಟೆವರೆಗೆ ಅಪರಾಧ ಪತ್ತೆ ಕಾರ್ಯದಲ್ಲಿ ನಿರತರಾಗಿದ್ದೆವು. ಪ್ರಥಮವಾಗಿ ನಾನು ಜಪ್ತು ವಾಹನವನ್ನು ನಿಲ್ಲಿಸಲು ಸನ್ನೆ ಮಾಡಿರುತ್ತೇನೆ. ಅಪರಾಧ ಸ್ಥಳದಲ್ಲಿ ತಯಾರಿಸಿದ ಸ್ಥಳ ಮಹಜರನ್ನು ನನ್ನೊಂದಿಗೆ ಇದ್ದ ಸಿಬ್ಬಂದಿ ಒಬ್ಬರು ತಯಾರಿಸಿರುತ್ತಾರೆ. ನಾನು ಅಪರಾಧ ಸ್ಥಳ ತಲುಪಿದ ನಂತರ ಮಹಜರಿಗೆ ಸಹಿ ಮಾಡಿರುವ ಪಂಚರು ಅಲ್ಲಿಗೆ ಬಂದಿರುತ್ತಾರೆ. ಸದ್ರಿ ಪಂಚರು ನಾನು ವಾಹನ ತಡೆದು ನಿಲ್ಲಿಸಿದ ನಂತರದಲ್ಲಿ ಬಂದಿರುತ್ತಾರೆ. ನಾವು ವಾಹನವನ್ನು ನಿಲ್ಲಿಸಿದ ಸ್ಥಳದಲ್ಲಿ ಪಂಚರು ನಡೆದು ಬರುತ್ತಿದ್ದರು. ನಾವು ರಾತ್ರಿ ರಸ್ತೆಗಸ್ತುವಿನಲ್ಲಿದ್ದ ಬಗ್ಗೆ ನನ್ನ ಕಛೇರಿಯ ದಾಖಲೆಗಳಲ್ಲಿ ಮಾಹಿತಿ ಇರುತ್ತದೆ. ನಾವು ವಾಹನಗಳ ತಪಾಸಣೆಗಾಗಿ ಮಂಗಳೂರು ಕಡೆಯಿಂದ ಕೂಳೂರು ಕಡೆ ಹೋಗುವ ದಾರಿಯ ಎಡಬದಿಗೆ ನಿಂತಿದ್ದೆವು. ನನ್ನ ಕಛೇರಿಯಿಂದ ಅಪರಾಧ ಸ್ಥಳವು ಸುಮಾರು 1–30 ಕಿ.ಮೀ ದೂರದಲ್ಲಿರುತ್ತದೆ.ಸದ್ರಿ ಸ್ಥಳ ಮಹಜರನ್ನು ನನ್ನೊಂದಿಗೆ ಗಸ್ತು ಕಾರ್ಯದಲ್ಲಿದ್ದ ಅಬಕಾರಿ ರಕ್ಷಕ ಆದ ಶ್ರೀ.ಶಬೀರ್ ಎಂಬವರು ಬರೆದಿರುತ್ತಾರೆ. ನಾನು ಅಪರಾಧ ಸ್ಥಳದಲ್ಲಿ ವಾಹನವನ್ನು ನಿಲ್ಲಿಸಿ ಶೋಧನೆ ಮಾಡಿದ ನಂತರ ಅಕ್ರಮ ಸಾಗಾಣಿಕೆ ಪತ್ತೆ ಮಾಡಿದ ಬಗ್ಗೆ ಸುಮಾರು 9 ಗಂಟೆಯಿಂದ 10–30 ಗಂಟೆಯವರೆಗೆ ಸ್ಥಳ ಮಹಜರನ್ನು ನಮ್ಮ ಸಿಬ್ಬಂಧಿಯವರಿಂದ ಬರೆಸಿರುತ್ತೇನೆ. ನಾನು ಆ ರಾತ್ರಿ ಅಪರಾಧ ಸ್ಥಳಕ್ಕೆ ಹೋದದ್ದೆ ಇಲ್ಲವೆಂಬುದು ಸರಿಯಲ್ಲ. ನಾನು ಜಪ್ತು ಮಾಡಿರುವ ವಾಹನಕ್ಕೂ ವಾಹನದ ಆರ್.ಸಿ ಮಾಲೀಕರಿಗೂ, ಅಕ್ರಮ ಸಾಗಾಣಿಕೆಗೂ ಕಳ್ಳಭಟ್ಟಿ ಸಾಗಾಣೆಗೂ ಯಾವುದೇ ಸಂಬಂಧವಿಲ್ಲ ಎಂಬುದು ಸರಿಯಲ್ಲ. ಮೊಕದ್ದಮೆಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ನನ್ನ ಕಛೇರಿಯಲ್ಲಿ ತಯಾರಿಸಿದ್ದು ಎಂಬುದು ಸರಿಯಲ್ಲ. ಇಲಾಖಾ ಪ್ರಗತಿ ಪರಿಶೀಲನಾ ಅಂಕಿಅಂಶಗಳಿಗೆ ಬೇಕಾಗಿ ನಾನು ಸುಳ್ಳು ಮೊಕದ್ದಮೆ ದಾಖಲಿಸಿದ್ದೇನೆ ಎಂಬುದು ಸರಿಯಲ್ಲ ಎಂದು ಪಾಟೀ ಸವಾಲಿಗೆ ಉತ್ತರ ನೀಡಿರುತ್ತಾರೆ.

ಪ್ರಾ.ಸಾ–2:

ಶ್ರೀ.ಲಲಿತ್ ಎಸ್.ರಾವ್, ಫ್ಲಾಟ್ ನಂ:193 ದೀಪಾ ಪಾರ್ಕ್, ಎಂ.ಜಿ.ರಸ್ತೆ, ಮಂಗಳೂರು ಇವರು ದಿನಾಂಕ: 17–6–2009 ರಂದು ಪ್ರಾಧಿಕಾರದ ಮುಂದೆ ಸಾಕ್ಷಿ ನೀಡುತ್ತಾ ದಿನಾಂಕ:3–11–2006ರಂದು ಮಂಗಳೂರು ನಗರದ ಕೊಟ್ಟಾರ ಚೌಕಿ ಬಳಿ ನನ್ನ ಸ್ನೇಹಿತರ ಮನೆಗೆ ಹೋಗಿದ್ದೆನು. ನಾನು ಕೊಟ್ಟಾರ ಚೌಕಿ ಹತ್ತಿರ ನಡೆದುಕೊಂಡು ಹೋಗುತ್ತಿದ್ದಾಗ ಅಬಕಾರಿ ಉಪ ನಿರೀಕ್ಷಕರು ನನ್ನನ್ನು ನಿಲ್ಲಿಸಿದರು. ಮತ್ತು ಅಲ್ಲಿ ಅವರು ತಡೆದು ನಿಲ್ಲಿಸಿದ ಮಾರುತಿ ಸಿಲ್ವರ್ ಕಲರ್ ಓಮ್ನಿ ವ್ಯಾನನ್ನು ನನ್ನ ಸಮಕ್ಷಮ ಪರೀಕ್ಷಿಸಿ ಅದರಲ್ಲಿ 9 ಟ್ಯೂಬ್‌ಗಳಲ್ಲಿ ಕಳ್ಳಭಟ್ಟಿ ಸಾರಾಯಿ ಇದ್ದದ್ದು ಕಂಡು ಬಂತು. ಸದ್ರಿ ವಾಹನದ ಚಾಲಕ ಕ್ಲಾಡಿ ಡಿಸೋಜಾರವರನ್ನು ವಿಚಾರಿಸಿ ವಾಹನ ಸಂ:KA-19-P-1680 ಆಗಿರುತ್ತದೆ. ಸ್ಥಳದಲ್ಲಿ ಅಬಕಾರಿ ನಿರೀಕ್ಷಕರು ನನ್ನ ಸಮಕ್ಷಮ ಅಮಾನತ್ತು ಮಹಜರು ಬರೆದು ಕ್ಯಾನನ್ನು ಮತ್ತು ಕಳ್ಳಭಟ್ಟಿ ಸಾರಾಯಿಯನ್ನು ಅಮಾನತುಪಡಿಸಿ ಕೊಂಡಿರುತ್ತಾರೆ. ಈ ಕುರಿತು ಬರೆದ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಮಹಜರು ಬರೆಯುವಾಗ ರಾತ್ರಿ 9–30 ಗಂಟೆ ಆಗಿತ್ತು. ಮಹಜರನ್ನು ನಿಶಾನೆ ಪಿ–1 ಎಂದು, ಸಾಕ್ಷಿ ಸಹಿಯನ್ನು ನಿಶಾನೆ ಪಿ–1 ಬಿ ಎಂದು ಗುರುತಿಸಿ ಸಾಕ್ಷಿ ನೀಡಿರುತ್ತಾರೆ.

ಪಾಟೀ ಸವಾಲು:

ಶ್ರೀ ಕಾರ್ತಿಕ್ ಉಡುಪ ವಕೀಲರು ಇವರ ಪಾಟೀ ಸವಾಲಿಗೆ ಉತ್ತರಿಸುತ್ತಾ ಈ ಪ್ರಕರಣದ ಸುಮಾರು 3 ವರ್ಷಗಳ ಮೊದಲು ನನಗೆ ವಿನೋದ್ ಕುಮಾರ್ ಇವರು ಪರಿಚಯವಿರುತ್ತಾರೆ. ನನ್ನ ಮೇಲೆ ಟಿ.ವಿ ವರದಿ ಬಂದಿರುವುದು ನಿಜ, ಆ ಕೇಸಿನಲ್ಲಿ ನಾನು ಒಳಗಿದ್ದೆ, ನನ್ನನ್ನು ವಿನೋದ್ ಕುಮಾರ್ ಬಿಡಿಸಿದರು ಎಂದರೆ ಸರಿಯಲ್ಲ. ಸುಬ್ರಹ್ಮಣ್ಯ ಪುರ, ಕೊಟ್ಟಾರ ಚೌಕಿ ಮಂಗಳೂರು ವಿಳಾಸ ಡಾ: ಕೇಶವ ನಾಯಕನವರಿಗೆ ಸೇರಿದ್ದು, ನಾನು ಸುಮಾರು 9–00 ಗಂಟೆಗೆ ಆ ಸ್ಥಳಕ್ಕೆ ಹೋಗಿದ್ದೆ. ನಮ್ಮ ಮನೆಯಿಂದ ಸುಬ್ರಹ್ಮಣ್ಯಪುರಕ್ಕೆ 8–00 ಕಿ.ಮೀ ಅಂತರವಿರುತ್ತದೆ. ಅಲ್ಲಿ ಹೋಗಲು ಏನೂ ವಿಶೇಷ ಕಾರಣ ಇರಲಿಲ್ಲ. ವಿನೋದ್ ಕುಮಾರ್ ಕೊಟ್ಟಾರ ಚೌಕಿಯಲ್ಲಿ ಆ ದಿನ ಭೇಟಿಯಾಗಿದ್ದರು. ಅಲ್ಲಿಂದ ಅರ್ಧ ಕಿ.ಮೀ.ಅಂತರವಿತ್ತು.ನಾನು ನಡೆದುಕೊಂಡು ಹೋಗುವಾಗ ಒಬ್ಬಂಟಿಗನಾಗಿದ್ದೆ. ನಾನು ಹೋಗುವ ಸಮಯದಲ್ಲಿ ಆ ಸ್ಥಳದಲ್ಲಿ 6–8 ಜನ ಇದ್ದರು. ಸುಬ್ರಹ್ಮಣ್ಯಪುರ ಹೈವೇಯಿಂದ 5 ಕಿ.ಮೀ ದೂರವಿದ್ದು ಆ ರಸ್ತೆ ಜೆ.ಬಿ. ಲೋಬೋ ಎಂಬ ಹೆಸರಿನಲ್ಲಿದೆ. ನಾನು ಹೋದ ಸ್ಥಳದಿಂದ ಅರ್ಧ ಗಂಟೆ ದೂರವಿರುತ್ತದೆ. ಮಹಜರನ್ನು ಯಾವ ಅಧಿಕಾರಿ ಬರೆದಿರುವರು ಎಂದು ನನಗೆ ಗೊತ್ತಿಲ್ಲ. ನಾನು ಹೋಗುವಾಗ ಮಹಜರನ್ನು ಬರೆಯುತ್ತಾ ಇದ್ದರು. ಸದ್ರಿ ಸ್ಥಳದಲ್ಲಿ ಅಬಕಾರಿ ಇಲಾಖೆಯವರು ಎಷ್ಟು ಮಂದಿ ಇದ್ದರು ಎಂದು ನನಗೆ ಗೊತ್ತಿಲ್ಲ.ನಾನು ಆ ದಿವಸ ಅಲ್ಲಿಗೆ ಹೋಗಲಿಲ್ಲ ಎಂದರೆ ಸರಿಯಲ್ಲ. ವಿನೋದ್ ಕುಮಾರ್ ಅಬಕಾರಿ ಉಪ ನಿರೀಕ್ಷಕರು ನನ್ನ ಆಪ್ತ ಸ್ನೇಹಿತರು ,ದೂರವಾಣಿ ಮೂಲಕ ಕರೆ ಮಾಡಿರುವರು. ನಾನು ಯಾವುದೇ ಘಟನೆ ನೋಡಲಿಲ್ಲ ಎಂದೂ ವಿನೋದ್ ಕುಮಾರ್ ರವರ ಮುಲಾಜಿಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಎಂದು ಪಾಟೀ ಸವಾಲಿಗೆ ಉತ್ತರಿಸಿರುತ್ತಾರೆ.

ಡಿಡಬ್ಲ್ಯೂ–1:

ಶ್ರೀ.ಕ್ಲಾಡಿ ಡಿಸೋಜ್, ಜಾನ್ ಬ್ಯಾಪ್ಟಿಸ್ಟ್ ಡಿಸೋಜ, ಪಡುಕೋಡಿ ಗ್ರಾಮ, ಮಂಗಳೂರು ಇವರು ದಿನಾಂಕ: 9–2–2010ರಂದು ಈ ಪ್ರಾಧಿಕಾರದ ಮುಂದೆ ರಕ್ಷಣಾ ಸಾಕ್ಷಿ ನುಡಿಯುತ್ತಾ ನಾನು ಈ ಕೇಸಿನಲ್ಲಿ ಅರ್ಜಿದಾರ, ನಾನು KA-19-P-1680 ಈ ಮಾರುತಿ ಒಮ್ನಿ ಕಾರಿನ ಮಾಲೀಕನಾಗಿರುತ್ತೇನೆ. ಅದರ ಬಿ ಎಕ್ಸ್‌ಟ್ರಾಕ್ಟ್ ಪ್ರತಿಯನ್ನು ಈ ಪ್ರಾಧಿಕಾರಕ್ಕೆ ಹಾಜರುಪಡಿಸಿರುತ್ತೇನೆ. ಈಗಾಗಲೇ ಅದನ್ನು ನಿಶಾನೆ ಪಿ–4 ಎಂದು ಗುರುತಿಸಲ್ಪಟ್ಟಿದೆ. ದಿನಾಂಕ:3–11–2006ರಂದು ಪುತ್ತೂರಿಗೆ ಮದುವೆಗೆ ಹೊರಟ ನನ್ನ ಒಮಿನಿ ಕಾರಿನಲ್ಲಿ ಹೊರಟು ಪಂಪವೆಲ್ ಸರ್ಕಲ್‌ನಲ್ಲಿ ಅದನ್ನು ಇಟ್ಟು ಬಸ್‌ನಲ್ಲಿ ಹೋದೆನು. ನಾನು ಅಲ್ಲಿಂದ ತೆರಳುವಾಗ 7–30 ಗಂಟೆ ಆಗಿತ್ತು. ನಾವು ಕಾರನ್ನು ಪಂಪುವೆಲ್ ನಿಂದ ಹಿಡಿದು ಕೊಟ್ಟಾರ ಚೌಕಿ ಕಡೆ ಬರುತ್ತಿದ್ದಾಗ ರೈಟ್ ಸೈಡಿನಲ್ಲಿ ಅಬಕಾರಿ ರಕ್ಷಕರು, ಉಪ ನಿರೀಕ್ಷಕರು ನಿಲ್ಲಿಸಿದ್ದಕ್ಕೆ ನಾನು ಗಾಡಿಯನ್ನು ಇನ್ನೊಂದು ಬದಿ ನಿಲ್ಲಿಸಿ ಬಂದೆ,ಆಗ ಅಲ್ಲಿ ಎ.ಜೆ ಶೆಟ್ಟಿ ಕಂಪೆನಿಯ ಕೆಲವು ಮಂದಿ ಇದ್ದರು. ಅಲ್ಲಿ ನನ್ನನ್ನು ವಿನೋದ್ ಕುಮಾರ್ ರವರು ಜೀಪು ಹತ್ತಲು ಹೇಳಿದರು. ನಾನು ಮಾರುತಿ ಒಮಿನಿ ಕಾರಿನಲ್ಲಿ ಕಳ್ಳಭಟ್ಟಿ ಕೊಂಡುಹೋಗುತ್ತಿದ್ದೆ ಎಂದರೆ ಸುಳ್ಳು. ಎ.ಜೆ. ಶೆಟ್ಟಿ ಕಂಪೆನಿ ಮತ್ತು ನನಗೂ ನಮ್ಮ ಮನೆ ಹತ್ತಿರ ಬಂದು ಅವರು ಗಲಾಟೆ ಮಾಡಿದಕ್ಕೆ ಮಾತುಕತೆಯಾಗಿತ್ತು. ಅದಕ್ಕೆ ಬೇಕಾಗಿ ಅವರು ಇದನ್ನೆಲ್ಲಾ ಸೃಷ್ಟಿಸಿದ್ದರು. ನಾನು ಜಾಗ ವ್ಯಾಪಾರ ಮಾಡುತ್ತಿದ್ದೇನೆ, ನನಗೆ ಲಿಕ್ಕರ್ ಮಾರುವ ಅವಶ್ಯಕತೆ ಇಲ್ಲ. ನನ್ನ ಗಾಡಿಯನ್ನು ಬಿಡುಗಡೆಗೊಳಿಸಬೇಕಾಗಿ ನಾನು ಈ ಪ್ರಾಧಿಕಾರದ ಮುಂದೆ ಕೇಳಿ ಕೊಳ್ಳುತ್ತಿದ್ದೇನೆ. ನಾನು ಆ ದಿವಸ ಮದುವೆಗೆ ಹೋದ ಬಗ್ಗೆ ಆಮಂತ್ರಣ ಪತ್ರಿಕೆಯನ್ನು ಈ ಪ್ರಾಧಿಕಾರದ ಮುಂದೆ ಹಾಜರು ಪಡಿಸಿರುತ್ತೇನೆ ಎಂದು ರಕ್ಷಣಾ ಸಾಕ್ಷಿ ನುಡಿದಿರುತ್ತಾರೆ.

ಪಾಟೀ ಸವಾಲು:

ರಕ್ಷಣಾ ಸಾಕ್ಷಿದಾರರನ್ನು ಅಭಿಯೋಗ ನಿರ್ದೇಶಕರು ಪಾಟೀ ಸವಾಲು ನಡೆಸಲಾಗಿ ಎ.ಜೆ. ಶೆಟ್ಟಿ ಕಂಪೆನಿ ಅಧಿಕೃತ ಅಬಕಾರಿ ಗುತ್ತಿಗೆದಾರರು ಎಂದರೆ ಸರಿ. ಸದ್ರಿ ಕಂಪೆನಿ ಬಹಳ ವರ್ಷಗಳಿಂದ ಅಧಿಕೃತ ಸಾರಾಯಿ ಗುತ್ತಿಗೆ ಪಡೆದಿರುತ್ತದೆ. ಅವರು ಸರ್ಕಾರದ ಬೊಕ್ಕಸಕ್ಕೆ ತೆರಿಗೆ ತುಂಬಲು ವ್ಯವಹಾರ ಮಾಡಬೇಕಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಯಾರಾದರೂ ಅನಧಿಕೃತವಾಗಿ ಕಳ್ಳಭಟ್ಟಿ ಸಾರಾಯಿ ದಂದೆಯಲ್ಲಿ ತೊಡಗಿದರೆ ಅಧಿಕೃತ ಕಂಪೆನಿಗೆ ನಷ್ಟ ಉಂಟಾಗುತ್ತದೆ ಎಂದರೆ ಸರಿ. ಸರ್ಕಾರದ ಬೊಕ್ಕಸಕ್ಕೆ ತೊಂದರೆ ಆಗಬಾರದು ಹಾಗೂ ಸಾರ್ವಜನಿಕರು ಅನಧಿಕೃತವಾಗಿ ಸಾರಾಯಿ ದಂದೆಯಲ್ಲಿ ಮುಳುಗಿ ಸಾರ್ವಜನಿಕರ ಆರೋಗ್ಯ ನೆಮ್ಮದಿಗೆ ಭಂಗ ಬರಬಾರದು ಎಂಬ ಹಿನ್ನಲೆಯಲ್ಲಿ ಅಬಕಾರಿ ಅಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದರೆ ಸರಿ. ನಾನು ಈ ಘಟನೆ ನಡೆಯುವ ಹಿಂದೆಯೆ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಎ.ಜೆ ಶೆಟ್ಟಿ ಸಂಸ್ಥೆಯ ಜನರನ್ನು ಸುಮಾರು 6 ವರ್ಷಗಳಿಂದ ನೋಡಿರುತ್ತೇನೆ. ಅವರಲ್ಲಿ ನಾನು ವೈಯಕ್ತಿಕವಾಗಿ ಮಾತನಾಡಿ ರುವುದಿಲ್ಲ. ನನಗೂ ಎ.ಜೆ. ಶೆಟ್ಟಿ ಸಂಸ್ಥೆಗೂ ಯಾವುದೇ ವ್ಯವಹಾರ ಇರಲಿಲ್ಲ. ನನಗೂ ಎ.ಜೆ. ಶೆಟ್ಟಿ ಸಂಸ್ದೆಗೂ ಯಾವುದೇ

ರೀತಿಯ ಸಂಬಂಧವು ಇರಲಿಲ್ಲ. ನನ್ನ ಯಾವುದೇ ವ್ಯವಹಾರದಲ್ಲಿ ಎ.ಜೆ. ಶೆಟ್ಟಿ ಸಂಸ್ಥೆ ಹಸ್ತಕ್ಷೇಪ ಮಾಡಿಲ್ಲ, ಮಂಗಳೂರು ನಗರದಲ್ಲಿ ಸಾಮಾನ್ಯವಾಗಿ ಕಳ್ಳಭಟ್ಟಿ ದಂದೆಯಲ್ಲಿ ಕೆಲವರು ತೊಡಗಿರುತ್ತಾರೆ. ಕಳ್ಳಭಟ್ಟಿ ದಂದೆಯಲ್ಲಿ ತೊಡಗಿದ್ದಲ್ಲಿ ಅಬಕಾರಿ ಇಲಾಖೆಯವರಿಗೆ ನೇರವಾಗಿ ಗೌಪ್ಯವಾಗಿ ಮಾಹಿತಿ ಹೋಗಿರುತ್ತದೆ .

ನಾನು ಮೇಲೆ ಹೇಳಿದ ದಿನದಂದು ಒಬ್ಬನೇ ಪುತ್ತೂರಿಗೆ ಮದುವೆಗೆ ಹೋಗಿರುತ್ತೇನೆ. ಪಂಪ್ ವೆಲ್‌ನಿಂದ ಪುತ್ತೂರಿಗೆ ರಾಷ್ಟ್ರೀಯ ಹೆದ್ದಾರಿ ದುರಸ್ತಿಯಲ್ಲಿರುವ ಕಾರಣ ನನ್ನ ವಾಹನವನ್ನು ಪಂಪುವೆಲ್‌ನಲ್ಲಿ ಬಿಟ್ಟು ಬಸ್ಸಿನಲ್ಲಿ ಹೋಗಿರುತ್ತೇನೆ. ಆ ದಿವಸ ಬೇರೆ ಎಷ್ಟೋ ವಾಹನಗಳು ಪಂಪುವೆಲ್‌ನಿಂದ ಪುತ್ತೂರಿಗೆ ಪ್ರಯಾಣಿಸಿದೆ. ಸದ್ರಿ ದಿವಸ ಪುತ್ತೂರಿನಲ್ಲಿ ಮದುವೆ ಇರಲಿಲ್ಲ ಹಾಗೂ ನಾನು ಮದುವೆಗೆ ಹೋಗಲಿಲ್ಲ ಎಂದರೆ ಸರಿಯಲ್ಲ. ನಾನು ದಿನಾಂಕ: 3–11–2006ಕ್ಕೆ ಮುಂಚೆ ಮೇಲೆ ಹೇಳಿದ ಅಬಕಾರಿ ನಿರೀಕ್ಷಕರನ್ನು ನೋಡಿರುವುದಿಲ್ಲ. ನನಗೂ ಎಜೆ ಶೆಟ್ಟಿ ಸಂಸ್ಥೆ ಜನರಿಗೂ ವೈಯಕ್ತಿಕವಾಗಿ ಯಾವುದೇ ದ್ವೇಷ ಇರುವುದಿಲ್ಲ. ನನ್ನ ಹಾಗೆ ಉಳಿದವರಿಗೂ ಕೂಡ ಎಜೆ ಶೆಟ್ಟಿ ಸಂಸ್ಥೆಯವರು ಸುಳ್ಳು ಕೇಸು ಹಾಕಿಸಿರುತ್ತಾರೆ. ಅದು ಯಾವ ಕಾರಣಕ್ಕಾಗಿ ಸುಳ್ಳು ಕೇಸು ಹಾಕಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಕಳೆದ 15 ವರ್ಷಗಳಿಂದ ನಾನು ಭೂ ವ್ಯವಹಾರ ನಡೆಸುತ್ತಾ ಬಂದಿರುತ್ತೇನೆ. ನಾನು ದಾಖಲೆಯಲ್ಲಿ ಭೂ ವ್ಯವಹಾರ ಮಾಡುವುದಿಲ್ಲ ನನ್ನ ಹೆಸರಲ್ಲಾಗಲಿ,ನನ್ನ ಕುಟುಂಬದವರಲ್ಲಾಗಲಿ ನಾನು ಮಾಡುತ್ತಿರುವ ಭೂವ್ಯವಹಾರಕ್ಕೆ ಯಾವುದೇ ದಾಖಲೆ ಇರುವುದಿಲ್ಲ. ನನಗೆ ಭೂ ವ್ಯವಹಾರ ಬಗ್ಗೆ ಆಗಲಿ ಅಥವಾ ಇತರ ಮೂಲದಿಂದಾಗಲೀ ಎಷ್ಟು ಆದಾಯ ಇದೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ. ದಿನಾಂಕ:3–11–2006ರಂದು ರಾತ್ರಿ 9 ಗಂಟೆ ಸಮಯ ಮಂಗಳೂರು ನಗರ ಕೊಟ್ಟಾರ ಚೌಕಿಯಲ್ಲಿ ನನ್ನ ಮಾರುತಿ ವ್ಯಾನ್ ಸಂ:KA-19-P-1680 ರಲ್ಲಿ ಅಕ್ರಮವಾಗಿ 9 ರಬ್ಬರ್ ಟ್ಯೂಬ್‌ನಲ್ಲಿ ಕಳ್ಳಭಟ್ಟಿ ಸಾರಾಯಿಯನ್ನು ಸಾಗಾಣಿಕೆ ಮಾಡುತ್ತಿದ್ದಾಗ ಅಬಕಾರಿ ಇಲಾಖೆಯವರು ವಾಹನ ಸಮೇತ ಅದನ್ನು ಜಪ್ತು ಮಾಡಿ ನನ್ನ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುತ್ತಾರೆ ಎಂದರೆ ಸರಿ ಅಲ್ಲ. ನಾನು ನನ್ನ ವಾಹನದ ಮುಟ್ಟುಗೋಲು ಪ್ರಕರಣದಿಂದ ತಪ್ಪಿಸಿಕೊಳ್ಳಲು ಈ ಪ್ರಾಧಿಕಾರದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಎಂದು ಅಭಿಯೋಜಕರ ಪಾಟೀ ಸವಾಲಿಗೆ ಉತ್ತರಿಸಿರುತ್ತಾರೆ.

ಪ್ರಕರಣದ ಎಲ್ಲಾ ದಾಖಲಾತಿಗಳನ್ನು ಮತ್ತು ಪ್ರಾ.ಸಾ–1 ಮತ್ತು 2 ಹಾಗೂ ರಕ್ಷಣಾ ಸಾಕ್ಷಿ ವಿಚಾರಣೆಯನ್ನು ಕೈಗೊಂಡು , ಸರ್ಕಾರಿ ಅಭಿಯೋಜಕರ ವಾದವನ್ನು ಆಲಿಸಿ ಮತ್ತು ಮಹಜರು ಸಾಕ್ಷಿದಾರರ ಹಾಗೂ ತನಿಖಾಧಿಕಾರಿಯವರ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ದಿನಾಂಕ:03–11–2006ರಂದು ಜಪ್ತು ಪಡಿಸಿರುವ KA-19-P-1680 ಮಾರುತಿ ಒಮಿನಿ ವ್ಯಾನ್‌ನಲ್ಲಿ 540 ಲೀ ಕಳ್ಳಭಟ್ಟಿ ಸಾರಾಯಿಯನ್ನು ಅಕ್ರಮವಾಗಿ ಸಾಗಾಟ ಮಾಡಿರುವುದನ್ನು, ಅಪರಾಧ ಸ್ಥಳದಲ್ಲಿ ಪಂಚರ ಸಮಕ್ಷಮ ಮಹಜರು ಜರುಗಿಸಿ ವಶಪಡಿಸಿಕೊಂಡಿದ್ದು, ಅಕ್ರಮ ಕಳ್ಳಭಟ್ಟಿ ಸಾಗಾಣಿಕೆಗೆ ಪ್ರಕರಣದ ಆರೋಪಿ ಹಾಗೂ ವಾಹನದ ಮಾಲೀಕರು ಖುದ್ದಾಗಿ KA-19-P-1680 ಮಾರುತಿ ಒಮಿನಿ ವ್ಯಾನ್‌ನ್ನು ಬಳಸಿರುವುದು ಪ್ರಾಧಿಕಾರದ ಮುಂದೆ ವಿಚಾರಣೆಗೆ ಒಳಪಟ್ಟಿರುವ ಸಾಕ್ಷ್ಯಾಧಾರಗಳಿಂದ ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಅಕ್ರಮ ಕಳ್ಳಭಟ್ಟಿ ಸಾಗಾಟ ತನ್ನ ತಿಳುವಳಿಕೆಗೆ ಬಾರದೇ ನಡೆದಿದೆ ಎಂಬುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸುವುದು ವಾಹನದ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ KA-19-P-1680 ಮಾರುತಿ ಒಮಿನಿ ವ್ಯಾನ್ ಇದರ ಮಾಲೀಕರೇ ಪ್ರಕರಣದಲ್ಲಿ ಮುಖ್ಯ ಅರೋಪಿತ ವ್ಯಕ್ತಿಯಾಗಿದ್ದು ಸದ್ರಿಯವರಿಗೆ ಪ್ರಾಧಿಕಾರದಿಂದ ನೊಂದಣಿ ಅಂಚೆ ಮೂಲಕ ನೀಡಲಾದ ಕಾರಣ ಕೇಳಿ ನೋಟೀಸು ಜ್ಯಾರಿಯಾಗಿದ್ದರೂ ಸದ್ರಿಯವರಿಂದ ಯಾವುದೇ ಉತ್ತರ ಈ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ. ವಾಹನದ ಮಾಲೀಕರು ವಾಹನದ ಬಿಡುಗಡೆ ಬಗ್ಗೆ ವಕೀಲರ ಮೂಲಕ ಮಧ್ಯಂತರ ಬಿಡುಗಡೆಗೆ ಕೋರಿರುವುದು ಮಾತ್ರವಲ್ಲದೇ ಪ್ರಾಧಿಕಾರದಿಂದ ನೀಡಲಾದ ಕಾರಣ ಕೇಳಿ ನೋಟಿಸಿಗೆ ಯಾವುದೇ ಸಮಂಜಸ ಉತ್ತರ ನೀಡಿ, ತನ್ನ ನಿರಪರಾಧಿತ್ವ ವನ್ನು ಸಾಬೀತುಪಡಿಸಿಕೊಳ್ಳುವ ಯಾವುದೇ ಸಮಂಜಸ ಸಾಕ್ಷ್ಯಾಧಾರಗಳನ್ನು ಒದಗಿಸಲು ವಿಫಲರಾಗಿರುತ್ತಾರೆ. ವಾಹನದ ಮಾಲೀಕರು ರಕ್ಷಣಾ ಸಾಕ್ಷಿ ನೀಡುತ್ತಾ ಕೃತ್ಯ ನಡೆದ ದಿನದಂದು ತಾನು ಪುತ್ತೂರಿಗೆ ಮದುವೆಗೆ ಹೋಗಲು ಕಾರಿನಲ್ಲಿ ಬಂದು ಕಾರನ್ನು ಪಂಪುವೆಲ್ ಸರ್ಕಲ್ ಬಳಿ ಇಟ್ಟಿರುತ್ತೇನೆ ಎಂದು ಹೇಳಿದ್ದು, ಪ್ರಾಧಿಕಾರದ ಮುಂದೆ ಈ ಬಗ್ಗೆ ತನ್ನ ವಕೀಲರ ಮೂಲಕ ಆಮಂತ್ರಣ ಪತ್ರಿಕೆಯೊಂದನ್ನು ಸಲ್ಲಿಸಿದ್ದು, ಸದ್ರಿ ಆಮಂತ್ರಣ ಪ್ರತಿಕೆಯು ದಿನಾಂಕ:27–12–2009 ರಂದು ಸ್ಟೆಂಟ್ ಪ್ರಾನ್ಸಿಸ್ ಜೇವಿಯರ್ಸ್ ಚರ್ಚ್, ಬಿಜೈ, ಮಂಗಳೂರು ಇಲ್ಲಿ ನಡೆದ ಮದುವೆಯ ಆಮಂತ್ರಣ ಪತ್ರಿಕೆಯಾಗಿದ್ದು, ಇದು ಒಂದಕ್ಕೊಂದು ತಾಳೆಕಂಡು ಬಾರದೇ ಇರುವುದರಿಂದ ವಾಹನದ ಮಾಲೀಕರು ತನ್ನ ತಪ್ಪನ್ನು ಮರೆಮಾಚಿಕೊಳ್ಳಲು ಕೃತ್ರಿಮ ದಾಖಲಾತಿಗಳನ್ನು ಒದಗಿಸಿರುವುದು ಪ್ರಾಧಿಕಾರಕ್ಕೆ

ಮನವರಿಕೆಯಾಗಿರುತ್ತದೆ. ಅಲ್ಲದೇ ವಾಹನದ ಮಾಲೀಕರು ವಾಹನದ ಮಧ್ಯಂತರ ಬಿಡುಗಡೆಗಾಗಿ ಸಲ್ಲಿಸಲಾಗಿದ್ದ ಅರ್ಜಿಯ ಜೊತೆಯಲ್ಲಿ ಲಗತ್ತಿಸಲಾದ ಆಮಂತ್ರಣ ಪತ್ರವನ್ನು ಪರಿಶೀಲಿಸಿದಾಗ ಪ್ರಕರಣ ನಡೆದ ದಿನವೇ ಮದುವೆ ಸಮಾರಂಭವು ನಡೆದಿರುವುದು ಸಾಬೀತಾಗಿದ್ದರೂ, ಮದುವೆಯ ಮಹೂರ್ತ ಸಮಯವು ಪೂರ್ವಾಹ್ನ 11–00 ಗಂಟೆಯಾಗಿದ್ದು, ಕೃತ್ಯ ನಡೆದ ಸಂದರ್ಭವು ರಾತ್ರಿ ಸುಮಾರು 9–00 ಗಂಟೆಯಾಗಿರುವುದರಿಂದ ಅಲ್ಲಿಯ ತನಕ ವಾಹನವನ್ನು ಪಂಪುವೆಲ್ ಎಂಬ ಜಾಗದಲ್ಲಿ ನಿಲ್ಲಿಸಲಾಗಿರುತ್ತದೆ ಎಂಬುದನ್ನು ಸಾಬೀತುಪಡಿಸಲು ಯಾವೊಂದು ಸಾಕ್ಷ್ಯಗಳನ್ನು ಒದಗಿಸಿರುವುದಿಲ್ಲ. ಹಾಗೂ ಸದ್ರಿ ದಾಖಲೆಗಳನ್ನು ಪ್ರಮುಖ ದಾಖಲೆಗಳೆಂದು ಪರಿಗಣಿಸಲು ಸಾಧ್ಯವಾಗುವುದಿಲ್ಲ. ಕಾರಣ ವಾಹನದ ಮಾಲೀಕರು ತನ್ನ ನಿರುಪಾಧಿತ್ವವನ್ನು ಸೂಕ್ತ ದಾಖಲಾತಿಗಳೊಂದಿಗೆ ಸಾಬೀತುಪಡಿಸಲು ವಿಫಲರಾಗಿರುವುದರಿಂದ ಹಾಗೂ ವಾಹನದ ಮಾಲೀಕರು ಈ ಹಿಂದೆ ಹಲವಾರು ಕಳ್ಳಭಟ್ಟಿ ಪ್ರಕರಣಗಳಲ್ಲಿ ಪಾಲ್ಗೊಂಡಿದ್ದು ಓರ್ವ ವೃತ್ತಿಪರ ಕಳ್ಳಭಟ್ಟಿ ದಂಧೆಯಲ್ಲಿ ತೊಡಗಿರುವ ವ್ಯಕ್ತಿಯಾಗಿರುವುದರಿಂದ ಹಾಗೂ ಅಪರಾಧ ಸ್ಥಳದಲ್ಲಿ ವಾಹನವನ್ನು ನಿಲ್ಲಿಸಿ ತಪಾಸಣೆಗೆ ಒಳಪಡಿಸಿದ ಸಂದರ್ಭದಲ್ಲಿ ವಾಹನದ ಮಾಲೀಕರೇ ಆರೋಪಿಯಾಗಿ ದಸ್ತಗಿರಿಯಾಗಿದ್ದು, ಈ ಅಕ್ರಮವು ವಾಹನದ ಮಾಲೀಕರ ತಿಳುವಳಿಕೆಯಿಂದಲೇ ನಡೆದಿದೆ ಎಂಬುದು ಪ್ರಾಧಿಕಾರಕ್ಕೆ ಮನದಟ್ಟಾಗಿರುವುದರಿಂದ ಎರಡನೆಯ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ಅಭಿಯೋಗದ ಪರ ಸಾಕ್ಷಿಗಳ ಹಾಗೂ ರಕ್ಷಣಾ ಸಾಕ್ಷಿಗಳ ವಿಚಾರಣೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ ಮಾರುತಿ ಒಮಿನಿ ವ್ಯಾನನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಪ್ರಾಧಿಕಾರದಲ್ಲಿ ನಡೆಸಲಾದ ವಿಚಾರಣೆಯ ಸಾಕ್ಷ್ಯಾಧಾರಗಳು ಯೋಗ್ಯವೆಂದು ತೀರ್ಮಾನಿಸಿ, ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ KA-19-P-1680 ಮಾರುತಿ ಒಮಿನಿ ವ್ಯಾನ್‌ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ.ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಎ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ,ನಿಯಮ 43 ಬಿ ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿದ ನಂತರ ಅಬಕಾರಿ ಉಪ ನಿರೀಕ್ಷಕರು(1), ಮಂಗಳೂರು ಉತ್ತರ ಜಾರಿ ಮತ್ತು ತನಿಖೆ ಇವರ ತಕ್ಷೀರು ಸಂ:9/2006–07,ದಿನಾಂಕ:03–11–2006ರಲ್ಲಿ ಜಪ್ತುಪಡಿಸಿರುವ ಮಾರುತಿ ಒಮಿನಿ ವ್ಯಾನ್ ಸಂ:KA-19-P-1680 (ಚಾಸೀಸ್ ನಂ:ST91IN630242 ಮತ್ತು ಇಂಜಿನ್ ಸಂ:F8BIN2709676)ನ್ನು ನಿಯಮ 43 ಎ (2)ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಪ್ರಾಧಿಕಾರದಿಂದ ದಿನಾಂಕ:26.09.2007ರಂದು ವಾಹನವನ್ನು ತಾತ್ಕಾಲಿಕವಾಗಿ ಮಧ್ಯಂತರ ಬಿಡುಗಡೆಗೊಳಿಸಿ ಹೊರಡಿಸಿರುವ ಆದೇಶವನ್ನು ರದ್ದುಗೊಳಿಸಿ ಆದೇಶಿಸಿದೆ. ಆರ್.ಸಿ. ಮಾಲೀಕರು ಸದರಿ ಮಧ್ಯಂತರ ಬಿಡುಗಡೆ ಹೊಂದಿರುವ ಮಾರುತಿ ಒಮಿನಿ ವ್ಯಾನ್ ಸಂ: KA-19-P-1680 ನ್ನು ಈ ಆದೇಶದ 30 ದಿನಗಳ ಒಳಗೆ ಈ ಪ್ರಾಧಿಕಾರದ ವಶಕ್ಕೆ ಅಬಕಾರಿ ಉಪ ನಿರೀಕ್ಷಕರು (1), ಮಂಗಳೂರು ಉತ್ತರ ವಲಯ–1 ಇವರಲ್ಲಿ ಒಪ್ಪಿಸಲು ಆದೇಶಿಸಿದೆ. ತಪ್ಪಿದಲ್ಲಿ ಭದ್ರತೆಯಾಗಿ ನೀಡಿರುವ ಬ್ಯಾಂಕ್ ಗ್ಯಾರಂಟಿ ಸಂಖ್ಯೆ:9/2007, ದಿನಾಂಕ:06.10.2007 ವಿಜಯ ಬ್ಯಾಂಕ್, ಕೂಳೂರು ಶಾಖೆ, ಮಂಗಳೂರು ಇದರ ಮೌಲ್ಯದ ಮೊತ್ತ ರೂ.1,05,000/– ವನ್ನು ಸರ್ಕಾರಕ್ಕೆ ಪಡೆದು ಚಲನ್ ಮೂಲಕ ಖಜಾನೆಗೆ ಪಾವತಿಸಿಕೊಳ್ಳಲು ಆದೇಶಿಸಿದೆ. ಈ ಆದೇಶದ ಪಾಲನೆ ಬಗ್ಗೆ ಹಾಗೂ ಸದ್ರಿ ಮುಟ್ಟುಗೋಲು ಹಾಕಿಕೊಳ್ಳಲಾದ ವಾಹನವನ್ನು ಅಬಕಾರಿ ಉಪ ನಿರೀಕ್ಷಕರು (1), ಮಂಗಳೂರು ಉತ್ತರ ವಲಯ–1 ಇವರು ಈ ಪ್ರಾಧಿಕಾರದ ಪರ ಅವರ ಸ್ವಾಧೀನಕ್ಕೆ ಪಡೆದುಕೊಂಡು ಈ ಪ್ರಾಧಿಕಾರಕ್ಕೆ ವರದಿ ಒಪ್ಪಿಸಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:17–05–2010 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ–I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:

ಪ್ರಾ.ಸಾ–I : ಶ್ರೀ ವಿನೋದ್ ಕುಮಾರ್,ಅಬಕಾರಿ ಉಪ ನಿರೀಕ್ಷಕರು
ಮಂಗಳೂರು ಉತ್ತರ ವಲಯ–1

ಪ್ರಾ.ಸಾ–2 : ಶ್ರೀ ಲಲಿತ್‌ರಾವ್, ಪ್ಲಾಟ್ ಸಂ:193 ದೀಪಾ ಪಾರ್ಕ್
ಎಂ.ಜಿ.ರಸ್ತೆ, ಮಂಗಳೂರು.

ಅನುಬಂಧ–II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:

ನಿಶಾನೆ ಪಿ–I	:	ಮಹಜರು ಪ್ರತಿ
ನಿಶಾನೆ ಪಿ–Iಎ	:	ಅದರ ಮೇಲಿನ ಸಹಿ
ನಿಶಾನೆ ಪಿ–2	:	ಪ್ರಥಮ ಮಾಹಿತಿ ವರದಿ
ನಿಶಾನೆ ಪಿ–2 ಎ	:	ಅದರ ಮೇಲಿನ ಸಾಕ್ಷಿ ಸಹಿ
ನಿಶಾನೆ ಪಿ–3	:	ರಾಸಾಯನಿಕ ವಿಶ್ಲೇಷಣಾ ವರದಿ
ನಿಶಾನೆ ಪಿ–4	:	ಬಿ ಎಕ್ಸ್ ಟ್ರಾಕ್ಟ್ ವರದಿ
ನಿಶಾನೆ ಪಿ–5	:	ತನಿಖಾ ವರದಿ
ನಿಶಾನೆ ಪಿ–5 ಎ	:	ಅದರ ಮೇಲಿನ ಸಾಕ್ಷಿ ಸಹಿ

ಅನುಬಂಧ–III

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು :

ಡಿಡಬ್ಲ್ಯೂ–1: ಶ್ರೀ ಕ್ಲಾಡಿ ಡಿಸೋಜ, ಬಿನ್ ಬ್ಯಾಪ್ಟಿಸ್ಟ್ ಡಿಸೋಜಾ ಕೂಳೂರು ರಾಯಿಕಟ್ಟೆ ಹೌಸ್, ಪಡುಕೋಡಿ ಗ್ರಾಮ, ಮಂಗಳೂರು.

ಅನುಬಂಧ–IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು: – ಇಲ್ಲ–

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.916

ಅಧೀಕ್ಷಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಗುಲಬರ್ಗಾ ವೃತ್ತ, ಗುಲಬರ್ಗಾ

4 (1) (ಎ)

ಈ ಅಧಿನಿಯಮದ ಅಡಿಯಲ್ಲಿ ಮಾಹಿತಿ ಹಕ್ಕಿಗಾಗಿ ಅನುಕೂಲ ಮಾಡಿಕೊಡುವ ರೀತಿಯಲ್ಲಿ ಮತ್ತು ನಮೂನೆಯಲ್ಲಿ ಈ ವೃತ್ತ ಕಛೇರಿಯ ಎಲ್ಲಾ ಮಾಹಿತಿಯನ್ನು ಕ್ರಮಬದ್ಧ ಸೂಚಿಪಟ್ಟಿಯಲ್ಲಿ ಈಗಾಗಲೇ ಗಣಕೀಕರಿಸಲಾಗಿದೆ. ಹಾಗೂ ಸರಕಾರದ ಮಟ್ಟದಲ್ಲಿ ಅಂತಹ ದಾಖಲೆಗಳು ಸುಲಭವಾಗಿ ದೊರೆಯುವಂತೆ ಸಿಸ್ಟಂನಲ್ಲಿ ಅಳವಡಿಸಲು ಸಹ ಸಲ್ಲಿಸಲಾಗಿದೆ. ಇಲಾಖೆಯ ಗಣಕೀಕರಣ ಪದ್ಧತಿಯಡಿ ಇಲಾಖೆಯ ವಿವಿಧ ಚಟುವಟಿಕೆಗಳ ಬಗ್ಗೆ ಎಂಪಿಕ್ ಮಾದರಿಯಲ್ಲಿ ಇಲಾಖೆಯ ವೆಬ್‌ಸೈಟ್‌ಗೆ (KPWD.Gov.in) ಮಾಹಿತಿಗಳನ್ನು ಅಳವಡಿಸಲಾಗಿದೆ.

ಅಧೀಕ್ಷಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಗುಲಬರ್ಗಾ ವೃತ್ತದ ಕಡತ ಮತ್ತು ರಜಿಸ್ಟರಗಳ ದಾಖಲಾತಿಗಳ 4 (1) (ಬಿ) ಪ್ರಕಾರ ಪಟ್ಟಿಯ ರಜಿಸ್ಟರ್ (2009–10 ನೇ ಸಾಲಿನ)

ಕ್ರ. ಸಂ.	ಕಡತದ ಸಂಖ್ಯೆ	ವಿಷಯ	ಇರುವ ಸ್ವರೂಪ	ಷರಾ
1	2	3	4	5
1)	1)	ನಿಯತಕಾಲಿಕೆ ರಜಿಸ್ಟರ್	ಅಭಿಲೇಖಾಲಯದಲ್ಲಿ ಸುರಕ್ಷಿತವಾಗಿ ಇರಿಸಿದೆ.	
2)	2)	ವಿಷಯ ವಹಿ		
3)	3)	ಕಾರ್ಯನಿರ್ವಾಹಣಾ ರಜಿಸ್ಟರ್		
4)	4)	ನೌಕರರ ಸೇವಾ ಪುಸ್ತಕ		
5)	5)	ಮಾಹಿತಿ ಹಕ್ಕು ಅಧಿನಿಯಮ ರಜಿಸ್ಟರ್		
6)	6)	ಇನ್‌ಕಂಬ್ರೆನ್ಸಿ ವಹಿ		
7)	7)	ಆಕಸ್ಮಿಕ ರಜಾ ವಹಿ		
8)	8)	ಸ್ಥಳೀಯ ಬಟವಾಡೆ ರಜಿಸ್ಟರ್		
9)	9)	ಶುದ್ಧ ಪ್ರತಿ ವಹಿ		
10)	10)	ರಹಸ್ಯ ವರದಿಗಳ ದಾಖಲೆಗಳ ವಹಿ		

ಅಧೀಕ್ಷಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಗುಲಬರ್ಗಾ ವೃತ್ತದ ಕಡತ ಮತ್ತು ರಜಿಸ್ಟರಗಳ ದಾಖಲಾತಿಗಳ 4 (1) (ಚಿ) ಪ್ರಕಾರ ಪಟ್ಟಿಯ ರಜಿಸ್ಟರ್ (2009–10 ನೇ ಸಾಲಿನ)

ಕ್ರ. ಸಂ.	ಕಡತದ ಸಂಖ್ಯೆ	ವಿಷಯ	ಇರುವ ಸ್ವರೂಪ	ಷರಾ
1	2	3	4	5
11)	11)	ಕ್ಯಾಶ್‌ಬುಕ್ ರಜಿಸ್ಟರ್	ಅಭಿಲೇಖಾಲಯದಲ್ಲಿ ಸುರಕ್ಷಿತವಾಗಿ ಇರಿಸಿದೆ.	
12)	12)	ಸಂಬಳ ಪಟ್ಟಿ ರಜಿಸ್ಟರ್		
13)	13)	ಟಿ.ಎ.ಬಿಲ್ಲು ರಜಿಸ್ಟರ್		
14)	14)	ಸ್ಟಾಕ್ ರಜಿಸ್ಟರ್		
15)	15)	ಸಿಬ್ಬಂದಿ ಹಾಜರಿ ಪುಸ್ತಕ		
16)	16)	ಡಿ.ಸಿ.ಬಿಲ್ಲು ರಜಿಸ್ಟರ್		
17)	17)	ಸ್ಟಾಂಪ್ ವಹಿ		
18)	18)	ವಿಧಾನಪರಿಷತ್, ವಿಧಾನಸಭೆ ಸದಸ್ಯರ ಪ್ರಶ್ನೆಗಳಿಗೆ ಉತ್ತರ ಕಳುಹಿಸುವ ಚಲನ ವಲನ ವಹಿ.		
19)	19)	3 ನೇ ದರ್ಜೆ ಗುತ್ತಿಗೆದಾರರ ನೋಂದಣಿ : ನವೀಕರಣ ವಹಿ.		
20)	20)	ಕಛೇರಿ ಆದೇಶ ವಹಿ.		

ಅಧೀಕ್ಷಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಗುಲಬರ್ಗಾ ವೃತ್ತದ ಕಡತ ಮತ್ತು ರಜಿಸ್ಟರಗಳ ದಾಖಲಾತಿಗಳ 4 (1) (ಬಿ) ಪ್ರಕಾರ ಪಟ್ಟಿಯ ರಜಿಸ್ಟರ್ (2009–10 ನೇ ಸಾಲಿನ)

ಕ್ರ. ಸಂ.	ಕಡತದ ಸಂಖ್ಯೆ	ವಿಷಯ	ಇರುವ ಸ್ವರೂಪ	ಷರಾ
1	2	3	4	5
21)	21)	ತಾಂತ್ರಿಕ ಮಂಜೂರಾತಿ	ಅಭಿಲೇಖಾಲಯದಲ್ಲಿ ಸುರಕ್ಷಿತವಾಗಿ ಇರಿಸಿದೆ.	
22)	22)	ಸಿಬ್ಬಂದಿಯ ಫೈಲ್		
23)	23)	ಆಪೆಂಡಿಕ್ಸ್–ಇ ಪುಸ್ತಕ		
24)	24)	ಅನುಮೋದಿತ ಟೆಂಡರ್ ರಜಿಸ್ಟರ್		
25)	25)	ಸ್ಟಾಂಪ್ ವಹಿ		
26)	26)	ಶಿಸ್ತು ಪ್ರಕರಣಗಳ ನಿಗಾ ವಹಿ		
27)	27)	ಸಾಮಾನ್ಯ ಸ್ವೀಕೃತಿ ವಹಿ		
28)	28)	ದರಪಟ್ಟಿ ವಹಿ		
29)	29)	ಗ್ರಂಥಾಲಯ ಪುಸ್ತಕಗಳ ವಹಿ.		

ಅಧೀಕ್ಷಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ, ಗುಲಬರ್ಗಾ ವೃತ್ತ, ಗುಲಬರ್ಗಾ
(2009–10 ನೇ ಸಾಲಿನ)
ಮಾಹಿತಿ ಹಕ್ಕು ಕೈಪಿಡಿ
ಮಾಹಿತಿ ಹಕ್ಕು ಅಧಿನಿಯಮ 2005 ರ
ಸೆಕ್ಷನ್ 4 (1) (ಎ) ರನ್ವಯ
ಪ್ರಕಟಿಸಲಾಗಿರುವ ಮಾಹಿತಿ
ಮಾಹಿತಿ ಹಕ್ಕು ಕೈಪಿಡಿ
ಮಾಹಿತಿ ಹಕ್ಕು ಅಧಿನಿಯಮ 2005 ರ
ಸೆಕ್ಷನ್ 4(1) (ಬಿ) ರನ್ವಯ
ಪ್ರಕಟಿಸಲಾಗಿರುವ ಮಾಹಿತಿ

ಮಾಹಿತಿ ಹಕ್ಕು ಅಧಿನಿಯಮ 2005 ರಡಿ 4 (1) (b)

ಅಧೀಕ್ಷಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಗುಲಬರ್ಗಾ ವೃತ್ತ, ಗುಲಬರ್ಗಾ

(i) ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು

ಅಧೀಕ್ಷಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಗುಲಬರ್ಗಾ ವೃತ್ತ ಗುಲಬರ್ಗಾ ಕಛೇರಿಯು 3 ವಿಭಾಗಗಳನ್ನೊಳಗೊಂಡು 1 ವಿದ್ಯುತ್ ಉಪ–ವಿಭಾಗ, ಗುಲಬರ್ಗಾ ಮತ್ತು 18 ಉಪ–ವಿಭಾಗಗಳು ಇರುತ್ತವೆ. ವಿವರಗಳು ಈ ಕೆಳಗಿನಂತಿವೆ.

ಅಧೀಕ್ಷಕ ಅಭಿಯಂತರರು			
ವಿದ್ಯುತ್ ಉಪ–ವಿಭಾಗ, ಗುಲಬರ್ಗಾ	**ಗುಲಬರ್ಗಾ ವಿಭಾಗ**	**ಯಾದಗಿರ ವಿಭಾಗ**	**ಬೀದರ ವಿಭಾಗ**
1	2	3	4
ವಿದ್ಯುತ್ ಉಪ–ವಿಭಾಗ, ಗುಲಬರ್ಗಾ	ಗುಲಬರ್ಗಾ	ಯಾದಗಿರ	ಬೀದರ
	ಚಿಂಚೋಳಿ	ಸೇಡಂ	ಹುಮನಾಬಾದ
	ಆಳಂದ	ಜೇವರ್ಗಿ	ಬಸವಕಲ್ಯಾಣ
	ಅಫಜಲ್‌ಪೂರ	ಶಹಾಪೂರ	ಭಾಲ್ಕಿ
	ಚಿತ್ತಾಪೂರ	ಸುರಪೂರ	ಸಂತಪೂರ (ಔರಾದ)
	ಕಾಳಗಿ		ವಿಶೇಷ ಉಪ–ವಿಭಾಗ, ಬೀದರ
	ವಿಶೇಷ ಉಪ–ವಿಭಾಗ, ಗುಲಬರ್ಗಾ		

(ii) ಅಧಿಕಾರಿಗಳ ಮತ್ತು ನೌಕರರ ಅಧಿಕಾರಗಳನ್ನು ಮತ್ತು ಕರ್ತವ್ಯಗಳು.

1) ಮೇಲೆ ತಿಳಿಸಿದ 3 ವಿಭಾಗಗಳ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಕಟ್ಟಡಗಳ ನಿರ್ಮಾಣ, ವಸತಿಗೃಹಗಳ ನಿರ್ಮಾಣ, ರಸ್ತೆ ಹಾಗೂ ಸೇತುವೆಗಳ ನಿರ್ಮಾಣ ಹಾಗೂ ಅವುಗಳ ಉಸ್ತುವಾರಿ ಹಾಗೂ ಜಮೀನು ಕಾಪಾಡುವಿಕೆ.

2) ನಬಾರ್ಡ್ ಸಾಲದ ಸಹಾಯದ ರಸ್ತೆಗಳ ನಿರ್ಮಾಣದ ಉಸ್ತುವಾರಿ.

3) ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಯೋಜನೆ ಕಾಮಗಾರಿಗಳ ಉಸ್ತುವಾರಿ.

4) ಗಡಿ ಪ್ರದೇಶ ಅಭಿವೃದ್ಧಿ ಯೋಜನೆ ಕಾಮಗಾರಿಗಳ ಉಸ್ತುವಾರಿ.

5) ಠೇವಣಿ ವಂತಿಗೆ ಕಾಮಗಾರಿಗಳ ಉಸ್ತುವಾರಿ.

6) ಕೇಂದ್ರ ರಸ್ತೆ ನಿಧಿ ಯೋಜನೆ ಕಾಮಗಾರಿಗಳ ಉಸ್ತುವಾರಿ.

7) ಅಧಿಕಾರಿಗಳು ಹಾಗೂ ಸಿಬ್ಬಂದಿಯವರ ಕುರಿತು ಸೇವೆ ಕುರಿತು ಪತ್ರ ವ್ಯವಹಾರ ಹಾಗೂ ಸೇವಾ ಪುಸ್ತಕಗಳ ನಿರ್ವಹಣೆ.

8) ಅಧಿಕಾರಿಗಳ ಹಾಗೂ ಸಿಬ್ಬಂದಿಯವರ ವೇತನ ಹಾಗೂ ಇತರೆ ಭತ್ಯೆ ಹಾಗೂ ಮುಂಗಡ, ಪ್ರಯಾಣ ಭತ್ಯೆ, ಹಬ್ಬದ, ಸಾಮಾನ್ಯ ಭವಿಷ್ಯನಿಧಿ ಮಂಜೂರಾತಿ ಹಾಗೂ ಬಟವಾಡೆ ಇತ್ಯಾದಿ.

9) ಸಿಬ್ಬಂದಿಯವರ ಚರಾಸ್ತಿ ಹಾಗೂ ಸ್ಥಿರಾಸ್ತಿ ಖರೀದಿಗಳಿಗೆ ಹಾಗೂ ಆಸ್ತಿ ಮತ್ತು ಋಣಪಟ್ಟಿ, ರಹಸ್ಯ ವರದಿ ನಿರ್ವಹಣೆ.

10) ಎಲ್.ಎ.ಕ್ಯೂ , ಎಲ್.ಸಿ.ಕ್ಯೂ ಗಳ ಪತ್ರ ವ್ಯವಹಾರ.

11) ಮಾಹಿತಿ ಹಕ್ಕು ಅಧಿನಿಯಮ 2005 ಕ್ಕೆ ಸಂಬಂಧಿಸಿದಂತೆ ಪತ್ರ ವ್ಯವಹಾರಗಳು.

12) ರಿಟ್ ಪಿಟೀಷನ್, ಕೆ.ಎ.ಟಿ, ನ್ಯಾಯಾಲಯ ಪ್ರಕರಣಗಳು ಹಾಗುಾ ಇಲಾಖಾ ವಿಚಾರಣೆ ಪ್ರಕರಣಗಳು.

13) 3 ನೇ ದರ್ಜೆ ಗುತ್ತಿಗೆದಾರರ ನೋಂದಣಿ ಹಾಗೂ ನವೀಕರಣ.

14) ಭೂಸ್ವಾಧೀನ ಹಾಗೂ ಭೂಮಿ ಲೀಜ್ ಮೇಲೆ ನೀಡುವ ಪ್ರಕರಣಗಳು

15) ಅನುಕಂಪ ಆಧಾರದ ಮೇಲೆ ನೇಮಕಾತಿ ಕುರಿತು ಪತ್ರ ವ್ಯವಹಾರ.

16) ನಿವೃತ್ತಿ ವೇತನದ ಪ್ರಕರಣಗಳು

17) ಸಿಬ್ಬಂದಿ : ಕಾಮಗಾರಿ ಅನುದಾನದ ವೆಚ್ಚದ ಪಟ್ಟಿ ತಯಾರಿಸುವುದು ಹಾಗೂ ಎಫ್.ಅರ್.ಐ. ಕುರಿತು ಪತ್ರ ವ್ಯವಹಾರ.

18) ಅನುದಾನ ಬಿಡುಗಡೆ ಕುರಿತು ಪತ್ರ ವ್ಯವಹಾರ ಹಾಗೂ ಹಣ ಭರವಸೆ ಪತ್ರದ ಬೇಡಿಕೆ ಸಲ್ಲಿಸುವುದು.

19) ಡ್ರಾಫ್ಟ್‌ನೋಟ್, ಡ್ರಾಫ್ಟ್‌ಪ್ಯಾರಾ , ಸಿ.ಎಸ್.ಎಸ್.ಎ, ಎಂ.ಎ.ಎಸ್. ಸಿ.ಎ.ಜಿ. ವರದಿಗಳ ಕುರಿತು ಪತ್ರ ವ್ಯವಹಾರ.

20) ಆರ್.ಎಸ್.ಎಲ್. ಕುರಿತು ಪ್ರಸ್ತಾವನೆ ಸಲ್ಲಿಸುವುದು.

21) ರಸ್ತೆ ಸಂಚಾರ ಮಾದರಿ ಸಮೀಕ್ಷೆಗಳು, ರಸ್ತೆ, ಸೇತುವೆಗಳ ವಾರ್ಷಿಕ ವರದಿಗಳ ಮೇಲ್ವಿಚಾರಣೆ ಹಾಗೂ ಪ್ರಸಕ್ತ ಪ್ರಕಟಣೆಗಾಗಿ ಅಂಕಿ ಅಂಶಗಳ ಸಂಗ್ರಹಣೆ ರಸ್ತೆ ಸಂಪರ್ಕ ಹೊಂದದಿರುವ ಹಳ್ಳಿಗಳ ವಿವರಗಳು, ರಾಜ್ಯ ಹೆದ್ದಾರಿ ಅಧಿನಿಯಮದಡಿ ಪತ್ರ ವ್ಯವಹಾರ.

22) ಕಟ್ಟಡಗಳ ವಾರ್ಷಿಕ ವರದಿ ಮತ್ತು ಪುಸ್ತಕ ಪ್ರಕಟಣೆಗಾಗಿ ಅಂಕಿ ಅಂಶಗಳ ಸಂಗ್ರಹಣೆ, ನ್ಯಾಷನಲ್ ಬಿಲ್ಡಿಂಗ್ ಸಂಘಟನಾ ವಾರ್ಷಿಕ ವರದಿಗಳ ಪರಿವೀಕ್ಷಣಾ, ನಿರೀಕ್ಷಣಾ ಸರ್ಕ್ಯೂಟ್ ಹೌಸ್‌ಗಳ ಅಂಕಿ ಅಂಶಗಳ ಸಂಗ್ರಹಣೆ, ವಾರ್ಷಿಕ ಆಡಳಿತ ವರದಿಗಳು.

23) ಗುಲಬರ್ಗಾ ವೃತ್ತದ ದರ ಪಟ್ಟಿ ತಯಾರಿಸುವುದು.

24) ಸೇತುವೆಗಳು, ವಾರ್ಷಿಕ ವರದಿ ಮತ್ತು ಪುಸ್ತಕ ಪ್ರಕಟಣೆಗಾಗಿ ಅಂಕಿ ಅಂಶಗಳ ಸಂಗ್ರಹಣೆ, ವಾರ್ಷಿಕ ಆಡಳಿತ ವರದಿಗಳು.

25) ಕಟ್ಟಡ ಸಾಮಾಗ್ರಿಗಳ ಮಾರುಕಟ್ಟೆ ದರಗಳ ಹಾಗೂ ಕೂಲಿ ದರಗಳ ವರದಿ, ಡಾಂಬರೀಕರಣ, ಯಂತ್ರೋಪಕರಣ ಹಾಗೂ ಗ್ಯಾಂಗ್ ಮದಜೂರ ಅಂಕಿ ಅಂಶಗಳ ವರದಿಗಳು.

26) ಅಧೀನ ಕಛೇರಿಗಳಾದ ವಿಭಾಗ ಮತ್ತು ಉಪ–ವಿಭಾಗಗಳ ವಾರ್ಷಿಕ ಆಡಳಿತಾತ್ಮಕ ತಪಾಸಣೆ ನಡೆಸುವುದು.

(iii) ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನಗಳು.

ಈ ವೃತ್ತ ಕಛೇರಿಯು 3 ವಿಭಾಗಗಳ ಕಾಮಗಾರಿಗಳ ಪ್ಲಾನ್, ಎಸ್ಟಿಮೆಟ್, ಟೆಂಡರ ಅನುಮೋದಿಸುವುದು ಹಾಗೂ ಮೇಲಾಧಿಕಾರಿಗಳಿಗೆ ಕಳುಹಿಸಿ ಅನುಮೋದನೆ ಪಡೆಯುವುದು.

(iv) **ಕಾರ್ಯಗಳು ನಿರ್ವಹಣೆಗೆ ಅದು ರೂಪಿಸಿರುವ ಸೂತ್ರಗಳು.**

ಈ ವೃತ್ತ ಕಛೇರಿಯಲ್ಲಿ ವಿಷಯ ನಿರ್ವಾಹಕರುಗಳಿಗೆ ವಿಷಯಗಳ ಹಂಚಿಕೆ ಮಾಡಿ ವ್ಯವಸ್ಥಾಪಕರ ಮತ್ತು ನಿಬಂಧಕರು ಹಾಗೂ ತಾಂತ್ರಿಕ ಸಹಾಯಕ ಉಸ್ತುವಾರಿಯಲ್ಲಿ ಕೆಲಸ ನಿರ್ವಹಿಸುವ ವ್ಯವಸ್ಥೆ ಮಾಡಲಾಗಿದೆ. ನಿಬಂಧಕರು, ತಾಂತ್ರಿಕ ಸಹಾಯಕರು ಕರ್ತವ್ಯ ನಿರ್ವಹಣೆಯ ಪೂರ್ಣ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಹಾಗೂ ಕಾರ್ಯನಿರ್ವಹಣೆಯಲ್ಲಿ ಅಧೀಕ್ಷಕ ಅಭಿಯಂತರರಿಗೆ ಸಹಕರಿಸುವುದು.

(v) ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಅದು ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಅಥವಾ ಅದರ ಉದ್ಯೋಗಗಳು ಬಳಸುವ ನಿಯಮಗಳು, ವಿನಿಮಯಗಳು ಅನುಸೂಚಿಗಳು, ಕೈಪಿಡಿಗಳು, ದಾಖಲಾತಿಗಳು.

ಲೋಕೋಪಯೋಗಿ ಇಲಾಖೆಯಲ್ಲಿ ರಚಿಸಿರುವ ನಿಯಮ ಕೆ.ಸಿ.ಎಸ್.ಅರ್, ಕೆ.ಎಫ್.ಸಿ, ಕೆ.ಟಿ.ಸಿ, ಬಜೇಟ್ ಮ್ಯಾನುವಲ್, ಪಿ.ಡಬ್ಲ್ಯೂ.ಡಿ. ಅಕೌಂಟ್ಸ್ ಕೋಡ್–I ವ್ಯಾಲ್ಯೂಂ–II, ಸ್ಟೋರ್ ಮ್ಯಾನುವಲ್, ಕೆ.ಸಿ.ಎಸ್ ಕಂಡಕ್ಟ ರೂಲ್ಸ್, ಸಿ.ಸಿ.ಎ ರೂಲ್ಸ್, ಡೆಲಿಗೇಶನ್ ಆಫ್ ಫೈನಾನ್ಸಿಯಲ್ ಪವರ್, ಸರಕಾರಿ ಸುತ್ತೋಲೆಯಲ್ಲಿ ಮೇಲಿಂದ ಮೇಲೆ ತಿಳಿಸಿದಂತೆ ತಾಂತ್ರಿಕ ಶಾಖೆಯಲ್ಲಿ ಹಾಗೂ ಆಡಳಿತ ಶಾಖೆಯಲ್ಲಿ ವ್ಯವಹಾರಣೆ ಕೈಕೊಳ್ಳುವುದು.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆಧ್ಯಾದೇಶ – 2000.

ಸಾದಿಲ್ವಾರು ವೆಚ್ಚದ ಕೈಪಿಡಿ ಚಾಲ್ತಿ ದರಪಟ್ಟಿ , ಹೆದ್ದಾರಿ ಕಾಯ್ದೆ 1964 ರ ನಿಯಮಗಳು.

ಕಾಮಗಾರಿಗಳ ಪರಿವೀಕ್ಷಣಾ ವರದಿ, ಪಾಲನಾ ವರದಿ, ಮತ್ತು ಸಲಹೆಗಳು.

ನಿಯತಕಾಲಿಕ ವಹಿ, ವಿಷಯ ವಹಿ, ಶುದ್ಧ ಪ್ರತಿ ವಹಿ, ರವಾನೆ ವಹಿ, ಸ್ಥಳೀಯ ಬಟವಾಡೆ ಪುಸ್ತಕ, ಆಕಸ್ಮಿಕ ರಜಾವಹಿ, ಗ್ರಂಥಾಲಯ ಪುಸ್ತಕ ನೀಡಿಕೆ ವಹಿ, ನೌಕರರ ಸೇವಾ ವಹಿ, ಇನಕಂಬೆನ್ಸಿ ವಹಿ, ಕಾರ್ಯನಿರ್ವಾಹಣಾ (ರಹಸ್ಯ) ವರದಿಗಳ ದಾಖಲೆಗಳ ವಹಿ, ನಿವೃತ್ತಿ ವೇತನ ನಿಗಾ ವಹಿ, ತಪಾಸಣೆಗಳ ಚಲನವಲನ ವಹಿ, ನಿಯತಕಾಲಿಕೆಗಳ ನಿಗಾ ವಹಿ, ನೌಕರರ ಮನೆ ವಿಳಾಸ ಮಾಹಿತಿ ವಹಿ, ಮಾಹಿತಿ ಹಕ್ಕು ಅಧಿನಿಯಮ ಪತ್ರ ವ್ಯವಹಾರಗಳ ವಹಿ, ಮಂಜೂರಾತಿ:ಕಾರ್ಯಕಾರಿ ಮತ್ತು ಖಾಲಿ ಹುದ್ದೆಗಳ ವಹಿ.

(vi) **ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ದಸ್ತಾವೇಜುಗಳ ಪ್ರವರ್ಗಗಳ ವಿವರ ಪಟ್ಟಿ**

1) ಅಂದಾಜು ಪಟ್ಟಿ ರಜಿಸ್ಟರ್, ತಾಂತ್ರಿಕ ಶಾಖೆಯ ಅನುಮೋದಿತ ರಜಿಸ್ಟರ್

2) ವಾರ್ಷಿಕ ಆಡಳಿತ ವರದಿ ರಜಿಸ್ಟರ್‌ಗಳು.

3) ಹಾಜರಿ ಪುಸ್ತಕ, ಸಾಮಾನ್ಯ ಸ್ವೀಕೃತ ವಹಿ, ಸ್ಟಾಂಪ್ ವಹಿ, ದಾಖಲೂ ವಹಿ.

4) ಪೀಠೋಪಕರಣ ಹಾಗೂ ಇತರೆ ಸಾಮಗ್ರಿಗಳ ವಹಿ.

5) ಕಛೇರಿ ಆದೇಶ ವಹಿ.

6) ಶಿಸ್ತು ಪ್ರಕರಣಗಳ ನಿಗಾ ವಹಿ.

7) ವಿಧಾನಸಭೆಗೆ : ವಿಧಾನ ಪರಿಷತ್ ಸದಸ್ಯರ ಪ್ರಶ್ನೆಗಳಿಗೆ ಉತ್ತರ ಕಳುಹಿಸುವ ಚಲನವಲನ ವಹಿ.

8) ಸಿಬ್ಬಂದಿಗಳ ಕಾರ್ಯನಿರ್ವಹಣಾ ವರದಿ ವಹಿ.

9) 3 ನೇ ದರ್ಜೆ ಗುತ್ತಿಗೆದಾರರ ನೋಂದಣಿ : ನವೀಕರಣ ವಹಿಗಳು.

(vii) ಅದರ ಕಾರ್ಯನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅದರ ಪ್ರಾತಿನಿಧ್ಯವಿರುವಂತೆ ಮಾಡಲು ಯಾವುದೇ ವ್ಯವಸ್ಥೆಯ ವಿವರಗಳು.

ಗುಲಬರ್ಗಾ ವೃತ್ತವು ಗುಲಬರ್ಗಾ , ಯಾದಗಿರ ಮತ್ತು ಬೀದರ ಜಿಲ್ಲೆಗಳನ್ನೊಳಗೊಂಡಿದುದ, ಸದರಿ ಜಿಲ್ಲೆಯಲ್ಲಿ ನಾಮ ನಿರ್ದೇಶನ ಹೊಂದಿರುವ ಎಂ.ಪಿ ಎಂ.ಎಲ್.ಎ, ಎಂ.ಎಲ್.ಸಿ ರವರಿಗೆ ಸಂಬಂಧಿಸಿದಂತೆ ಅವರ ಫಂಡ್‌ನಲ್ಲಿ ಮಂಜೂರಾದ ಸುಧಾರಣೆ ಕಾಮಗಾರಿಗಳನ್ನು ಅವರವರ ಕ್ಷೇತ್ರಗಳಲ್ಲಿ ಮಂಜೂರಾದಂತೆ ಕ್ರಮಕೈಕೊಳ್ಳಲಾಗುವುದು.

ಕ್ರ. ಸಂ.	ಅಧಿಕಾರಿಯ ಹೆಸರು ಮತ್ತು ಪದನಾಮ	ಅವರು ನಿರ್ವಹಿಸುವ ವಿಷಯಗಳು	ದೂರವಾಣಿ ಸಂಖ್ಯೆ
1	**2**	**3**	**4**
1)	ಶ್ರೀ ಜಿ.ಚಂದ್ರಮೌಳಿ ನಾಯಕ್. ಅ.ಅ.	ಲೋ.ಇ. ವೃತ್ತದಡಿ ಬರುವ ಎಲ್ಲಾ ವಿಭಾಗಗಳ ಕಾಮಗಾರಿಗಳ ಉಸ್ತುವಾರಿ ಹಾಗೂ ಸಿಬ್ಬಂದಿ ವಿಷಯಗಳ ನಿರ್ವಹಣೆ ಉಸ್ತುವಾರಿ.	ದೂರವಾಣಿ ಸಂಖ್ಯೆ: 08472–220272 ದೂ.ಸಂಖ್ಯೆ: ಫ್ಯಾಕ್ಸ್: 08472–220146
2)	ಶ್ರೀ ಕುಮಾರಸ್ವಾಮಿ ತಾಂ.ಸಹಾಯಕರು	ಈ ವೃತ್ತದಡಿ ಬರುವ ಕಟ್ಟಡ ಕಾಮಗಾರಿಗಳ ಅಂದಾಜುಗಳ ಮಂಜೂರಾತಿ ಟೆಂಡರಗಳ ಸಂಸ್ಕರಣೆ, ಅಂಗೀಕಾರ, ಮೇಲಾಧಿಕಾರಿಗಳಿಗೆ ಸಲ್ಲಿಸುವುದು ಹಾಗೂ ಪ್ರಗತಿ ಪರಿಶೀಲಿಸಿ ವಿನ್ಯಾಸ ವಿವರಗಳನ್ನು ಒದಗಿಸುವುದು. ಮೇಲಿನ ವಿಷಯಗಳಿಗೆ ಸಂಬಂಧಿಸಿದ ವರದಿ ಸಲ್ಲಿಸುವುದು ಹಾಗೂ ಪತ್ರವ್ಯವಹಾರ ನೋಡಿಕೊಂಡು ಅಧೀಕ್ಷಕ ಅಭಿಯಂತರರಿಗೆ ಸಹಕರಿಸುವುದು. ಎಲ್.ಎ.ಕ್ಯೂ, ಎಲ್.ಸಿ.ಕ್ಯೂ ಗಳಿಗೆ, ಮಾಹಿತಿ ಹಕ್ಕು ಅಧಿನಿಯಮಗಳಿಗೆ ಸಂಬಂಧಿಸಿದಂತೆ ತೀವ್ರ ಉತ್ತರಿಸಲು ಕ್ರಮ ಕೈಗೊಳ್ಳುವುದು.	ದೂರವಾಣಿ ಸಂಖ್ಯೆ: 08472–220272 ದೂ.ಸಂಖ್ಯೆ: ಫ್ಯಾಕ್ಸ್: 08472–220146
3)	ಶ್ರೀ ಹೆಚ್.ಎಂ. ದೊಡ್ಡಮನಿ, ನಿಬಂಧಕರು	ಈ ವೃತ್ತದ ಎಲ್ಲಾ ಅಧಿಕಾರಿಗಳು ಹಾಗುೂ ಸಿಬ್ಬಂದಿಗಳ ಸೇವೆಗಳ ಪತ್ರ ವ್ಯವಹಾರ, ಸೇವಾ ವಿವರಗಳ ಕ್ರೋಢಿಕರಣ, ಸಾಮಾನ್ಯ ಭವಿಷ್ಯ ನಿಧಿ, ಚರಾಸ್ತಿ , ಸ್ಥಿರಾಸ್ತಿ ಖರೀದಿಗೆ ಅನುಮೋದನೆ ನೀಡುವುದು. ಆಸ್ತಿ ಮತ್ತು ಋಣಪಟ್ಟಿ , ರಹಸ್ಯ ವರದಿಗಳ ನಿರ್ವಹಣೆ ಇತರೆ ಎಲ್ಲಾ ಸಂಬಂಧಿತ ವ್ಯವಹಾರಗಳಿಗೆ ಅಧೀಕ್ಷಕ ಅಭಿಯಂತರರಿಗೆ ನೆರವಾಗುವುದು.	ದೂರವಾಣಿ ಸಂಖ್ಯೆ: 08472–220272 ದೂ.ಸಂಖ್ಯೆ: ಫ್ಯಾಕ್ಸ್: 08472–220146

(viii) ತನ್ನ ಆಧೀನಕೊಳ್ಳಪಡುವ ಸಮಿತಿಗಳ , ಮಂಡಳಿ, ಪರಿಷತ್ ಸಭೆಗಳಿಗೆ ಸಾರ್ವಜನಿಕ ಪ್ರವೇಶ ಹಾಗೂ ಸಾರ್ವಜನಿಕರಿಗೆ ಮುಕ್ತವಾಗಿರುವ ಬಗ್ಗೆ ಸಭಾ ನಡವಳಿಗಳ ವಿವರ ನೀಡುವ ಅವಕಾಶ.

ಇಲಾಖೆಯಲ್ಲಿರುವ ನಿಗಮ, ಪರಿಷತ್ತು , ಸಮಿತಿ ಮತ್ತು ಇತರೆ ಸಂಸ್ಥೆಗಳ ವಿವರ ಮತ್ತು ಅದರ ಉದ್ದೇಶ ಮತ್ತು ಈ ಸಂಸ್ಥೆಗಳು ಮತ್ತು ಸಭೆಯ ನಡವಳಿಗಳು ಸಾರ್ವಜನಿಕರಿಗೆ ಲಭ್ಯವಿರುವ ಬಗ್ಗೆ ಏನು ಇರುವುದಿಲ್ಲ.

(ix) ಅದರ ಅಧಿಕಾರಿಗಳ ನೌಕರರ ನಿರ್ದೇಶಿಕೆಯಲ್ಲಿ (Directory)

ಅಧೀಕ್ಷಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ವೃತ್ತ, ಗುಲಬರ್ಗಾ ವೃತ್ತದ ಅಧಿಕಾರದ ಬಗ್ಗೆ ಖಂಡಿಕೆ (2) ರಲ್ಲಿ ವಿವರಿಸಲಾಗಿದೆ.

ಸಿಬ್ಬಂದಿ ವರ್ಗದ ನಿರ್ದೇಶಿಕೆಯಲ್ಲಿ (ಸಂಘಟನಾ ನಕ್ಷೆ) ಈ ಕೆಳಗಿನಂತಿದೆ.

1)	ಅಧೀಕ್ಷಕ ಅಭಿಯಂತರರು	ಶ್ರೀ ಜಿ.ಚಂದ್ರಮೌಳಿ ನಾಯಕ್
2)	ತಾಂತ್ರಿಕ ಸಹಾಯಕರು	ಶ್ರೀ ಕುಮಾರಸ್ವಾಮಿ ಸರಾಫ್
3)	ನಿಬಂಧಕರು	ಶ್ರೀ ಹೆಚ್.ಎಂ.ದೊಡ್ಡಮನಿ
4)	ಸಹಾಯಕ ಇಂಜಿನೀಯರ (ಪರಿಸರ)	ಖಾಲಿ
5)	ಸಹಾಯಕ ಇಂಜಿನೀಯರ	ಶ್ರೀ ಮಹ್ಮದ್ ಅಬ್ದುಲ್ ಹಮೀದ್
		ಶ್ರೀ ಬಿ.ವ್ಹಿ.ಪಾಟೀಲ್
		ಶ್ರೀ ಬಸವರಾಜ್
		ಶ್ರೀ ವಿಜಯಕುಮಾರ ಮೂಲಗೆ
6)	ಕಿರಿಯ ಇಂಜಿನೀಯರರು	ಶ್ರೀ ಈಶ್ವರ ಜಟಿಂಗರಾವ್.
		ಶ್ರೀ ಶಶಿಕಾಂತ ಘನಾತೆ
7)	ಪ್ರಥಮ ದರ್ಜೆ ಸಹಾಯಕರು	ಶ್ರೀ ಶರಣಪ್ಪ
		ಶ್ರೀ ಗೋಪಾಲರಾವ್
8)	ದ್ವಿತೀಯ ದರ್ಜೆ ಸಹಾಯಕರು	ಶ್ರೀ ಕೋದಂಡರಾಮಪ್ಪ
		ಶ್ರೀ ಪಿ.ಎಸ್.ಮಾಲಿ ಪಾಟೀಲ್
		ಶ್ರೀ ಕು.ವರ್ಷಾ
		ಶ್ರೀ ತಾರಾಬಾಯಿ ದೇಸಾಯಿ
9)	ಸಹಾಯಕ ಸಾಂಖ್ಯಿಕ ಅಧಿಕಾರಿ	ಶ್ರೀ ಅಬ್ದುಲ್ ಮಜೀದ್
10)	ಗಣಕ ಯಂತ್ರ ಸಹಾಯಕ	ಶ್ರೀ ಏಜಾಜ್ ಅಲೀ, ದ್ವಿ.ದ.ಸರನ್ನು ಪರಿಗಣಿಸಿದೆ.
11)	ಬೆರಳಚ್ಚುಗಾರರು	ಶ್ರೀ ಮೋಹನಲಾಲ್
		ಶ್ರೀ ನಾಗಪ್ಪಾ
12)	ಶೀಘ್ರಲಿಪಿಗಾರರು	ಶ್ರೀ ಮಹಾಂತಪ್ಪಾ. ಎಸ್. ಸಾಗನೂರ
13)	ನೀಲಿ ನಕ್ಷೆಗಾರರು	ಶ್ರೀ ಪ್ರಭು
14)	ವಾಹನ ಚಾಲಕರು	ಶ್ರೀ ಮಹ್ಮದ್ ಇಸ್ಮಾಯಿಲ್
15)	ಅನುಚರರು	ಶ್ರೀ ರುಕ್ಮಣ್ಣ
		ಖಾಲಿ

16)	ಜವಾನರು	ಶ್ರೀ ಶರಣಪ್ಪ
		ಶ್ರೀ ಹೈದು
		ಶ್ರೀ ಅಂಬಿಕಾಬಾಯಿ ಕುಲಕರ್ಣಿ
		ಶ್ರೀ ರಾಜಶೇಖರ ದೊರೆ
17)	ಕಸಗೂಡಿಸುವವರು	ಶ್ರೀ ಬಾಬುರಾವ್

(x) ಇಲಾಖೆಯ ವಿನಿಮಯಗಳಲ್ಲಿ ಉಪಬಂಧಿಸಿರುವಂತೆ ಪರಿಹಾರದ ವ್ಯವಸ್ಥೆಯೂ ಸೇರಿದಂತೆ ಅದರ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ಪಡೆಯುವ ತಿಂಗಳ ಸಂಬಳವನ್ನು : ವೇತನವನ್ನು ಕರ್ನಾಟಕ ಸರಕಾರದ ಸಂಚಿತ ನಿಧಿಯಿಂದ ಪಾವತಿಸಲಾಗುತ್ತಿದೆ.

ಕ್ರ.ಸಂ.	ಹುದ್ದೆ ಮತ್ತು ಹೆಸರು	ವೇತನ ಶ್ರೇಣಿ	ಮೂಲ ವೇತನ
1)	ಶ್ರೀ ಜಿ.ಚಂದ್ರಮೌಳಿ ನಾಯಕ್, ಅ.ಅ.	20025–28275	27600
2)	ಶ್ರೀ ಸರಾಫ್ ಕುಮಾರಸ್ವಾಮಿ, ತಾಂ.ಸ.	14050–25050	25050
3)	ಶ್ರೀ ಹೆಚ್.ಎಂ.ದೊಡ್ಡಮನಿ, ನಿಬಂಧಕರು	10800–20025	16000
4)	ಶ್ರೀ ವಿಜಯಕುಮಾರ ಮೂಲಗೆ, ಸ.ಇಂ.	14050–25050	24450
5)	ಶ್ರೀ ಮಹ್ಮದ್ ಅಬ್ದುಲ್ ಹಮೀದ್, ಸ.ಇಂ.	12000–22650	15200
6)	ಶ್ರೀ ಬಿ.ವ್ಹಿ.ಪಾಟೀಲ್, ಸ.ಇಂ.	11400–21600	14400
7)	ಶ್ರೀ ಬಸವರಾಜ್, ಸ.ಇಂ.	11400–21600	13350
8)	ಶ್ರೀ ಶಶಿಕಾಂತ ಘನಾತೆ, ಕಿ.ಇಂ.	8825–16000	14800
9)	ಶ್ರೀ ಈಶ್ವರ ಜಟೆಂಗ್‌ರಾವ್, ಕಿ.ಇಂ.	8825–16000	12300
10)	ಶ್ರೀ ಗೋಪಾಲರಾವ್, ಪ್ರ.ದ.ಸ.	7275–13350	11400
11)	ಶ್ರೀ ಶರಣಪ್ಪ , ಪ್ರ.ದ.ಸ	7275–13350	10500
12)	ಶ್ರೀ ಪಿ.ಎಸ್.ಮಾಲಿ ಪಾಟೀಲ್, ದ್ವಿ.ದ.ಸ.	7275–13350	12650
13)	ಶ್ರೀ ಕೋದಂಡರಾಮಪ್ಪ , ದ್ವಿ.ದ.ಸ.	7275–13350	10250
14)	ಶ್ರೀಮತಿ ತಾರಾಬಾಯಿ ದೇಸಾಯಿ, ದ್ವಿ.ದ.ಸ.	7275–13350	10000
15)	ಕು.ವರ್ಷಾ ದ್ವಿ.ದ.ಸ.	5800–10500	5900
16)	ಶ್ರೀ ಏಜಾಜ್ ಅಲೀ, ದ್ವಿ.ದ.ಸ.	5800–10500	6500
17)	ಶ್ರೀ ಮಹಾಂತಪ್ಪ.ಎಸ್.ಸಾಗನೂರ, ಶೀಘ್ರಲಿಪಿಗಾರ	7275–13350	8600
18)	ಶ್ರೀ ಮೋಹನಲಾಲ್ ಹಿರಿಯ ಬೆರಳಚ್ಚುಗಾರ	7275–13350	10800
19)	ಶ್ರೀ ನಾಗಪ್ಪಾ ಬೆರಳಚ್ಚುಗಾರ	6250–12000	7800
20)	ಶ್ರೀ ಪ್ರಭು, ನೀಲಿ ನಕ್ಷೆಗಾರರು	5800–10500	10000

ಕ್ರ.ಸಂ.	ಹುದ್ದೆ ಮತ್ತು ಹೆಸರು	ವೇತನ ಶ್ರೇಣಿ	ಮೂಲ ವೇತನ
21)	ಶ್ರೀ ರುಕ್ಮಣ್ಣಾ , ಅನುಚರರು	5500–9500	8825
22)	ಶ್ರೀ ಶರಣಪ್ಪ ಜವಾನ್	5500–9500	9750
23)	ಶ್ರೀ ರಾಜಶೇಖರ್ ದೊರ, ಜವಾನ್	4800–7275	5200
24)	ಶ್ರೀ ಹೈದು	5500–9500	6650
25)	ಶ್ರೀಮತಿ ಅಂಬಿಕಾಬಾಯಿ ಕುಲಕರ್ಣಿ	5200–8200	6250
26)	ಶ್ರೀ ಬಾಬುರಾವ, ಕಸಗೂಡಿಸುವವರು	4800–7275	6250
27)	ಶ್ರೀ ಮಹ್ಮದ್ ಇಸ್ಮಾಯಿಲ್, ವಾ.ಚಾ	5800–10500	8000
28)	ಶ್ರೀ ಅಬ್ದುಲ್ ಮಜೀದ್, ಸ.ಸಾ.ಅಧಿಕಾರಿ	10000–18150	18150

(xi) ಎಲ್ಲಾ ಯೋಜನೆಗಳ ವಿವರಗಳನ್ನು ಸೂಚಿಸುವ, ಪ್ರಸ್ತಾವಿತ ವೆಚ್ಚಗಳನ್ನು ಮಾಡಲಾದ ಬಟವಾಡೆಗಳ ವರದಿಯನ್ನು ಸೂಚಿಸಿ ಅದರ ಪ್ರತಿಯೊಂದು ಏಜೆನ್ಸಿಗೆ ಹಂಚಿಕೆ ಮಾಡಲಾದ ಆಯವ್ಯಯವನ್ನು (2009–10 ಆಯವ್ಯಯ ತಃಖ್ತೆ)

(xii) ಹಂಚಿಕೆ ಮಾಡಲಾದ ಮೊಬಲಗುಗಳೊಳಗೊಂಡು, ಸಹಾಯಧನ, ಕಾರ್ಯಕ್ರಮಗಳ ಜಾರಿಯ ವಿಧಾನವನ್ನು ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರಗಳನ್ನು ಈ ವೃತ್ತದಡಿ ಸಹಾಯಧನ ನೀಡುವ ಕಾರ್ಯಕ್ರಮ ಯಾವುದು ಇರುವುದಿಲ್ಲ.

(xiii) ನೀಡಿರುವ ರಿಯಾಯ್ತಿಗಳನ್ನು ಅನುಮತಿ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು ಪಡೆಯುವ ವಿವರ.

ಈ ವೃತ್ತದಡಿ ಯಾವುದು ಇರುವುದಿಲ್ಲ.

(xiv) ಇಲಾಖೆಯಲ್ಲಿ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸುವ ಮಾಹಿತಿಗೆ ಸಂಬಂಧಿಸಿದ ವಿವರಗಳು.

ಇ–ಟೆಂಡರ್ ಮತ್ತು ಇ–ಮೇಲ್, ಇ–ಪ್ರಾಕ್ಯೂರಮೆಂಟ್‌ಗಳಲ್ಲಿ ಮಾಹಿತಿ ಅಳವಡಿಸಲಾಗಿದೆ.

(xv) ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ವೇಳೆ ಕರ್ತವ್ಯ, ಸಾರ್ವಜನಿಕ ಸೌಲಭ್ಯಗಳ ವಿವರ.

ಸಾರ್ವಜನಿಕ ಬಳಕೆಗೆ ಗ್ರಂಥಾಲಯ ಅಥವಾ ವಾಚನಾಲಯ ಇರುವುದಿಲ್ಲ.

(xvi) ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು ಮತ್ತು ಇತರೆ ವಿವರ.

ಮೇಲ್ಮನವಿ ಪ್ರಾಧಿಕಾರಿಗಳು	ಸಾರ್ವಜನಿಕ ಮಾಹಿತಿ ಅಧಿಕಾರಿ	ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ
ಮುಖ್ಯ ಇಂಜಿನೀಯರರು, ಸಂಪರ್ಕ ಮತ್ತು ಕಟ್ಟಡಗಳು (ಉತ್ತರ), ಧಾರವಾಡ	ಅಧೀಕ್ಷಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ವೃತ್ತ , ಗುಲಬರ್ಗಾ ದೂರವಾಣಿ ಸಂಖ್ಯೆ: 08472–220272 ದೂ.ಸಂಖ್ಯೆ: ಫ್ಯಾಕ್ಸ್:08472–220146 email: seglb@kpwd.Gov.in	1) ತಾಂತ್ರಿಕ ಸಹಾಯಕರು ಅಧೀಕ್ಷಕ ಅಭಿಯಂತರವರಿಗೆ 2) ನಿಬಂಧಕರು, ಅಧೀಕ್ಷಕ ಅಭಿಯಂತರವರಿಗೆ ದೂರವಾಣಿ ಸಂಖ್ಯೆ: 08472–220272 ದೂರವಾಣಿ ಸಂಖ್ಯೆ: ಫ್ಯಾಕ್ಸ್:08472–220146 email: seglb@kpwd.Gov.in

(xvii) ನಿಯಮಿಸಬಹುದಾದಂತಹ ಇತರೆ ಮಾಹಿತಿಯನ್ನು ಪ್ರಕಟಿಸತಕ್ಕದ್ದು. ಮತ್ತು ಆ ತರುವಾಯ ಪ್ರತಿ ವರ್ಷ ಈ ಪ್ರಕಟಣೆಗಳನ್ನು ಅಂದಿನವರೆಗೆ

ಇಂದಿನವರೆಗೆ ಸಂಪೂರ್ಣ ಮಾಹಿತಿ ಇರುತ್ತದೆ.

ಅಧೀಕ್ಷಕ ಅಭಿಯಂತರರು,
ಲೋಕೋಪಯೋಗಿ, ಬಂದರು ಮತ್ತು
ಒಳನಾಡು ಜಲಸಾರಿಗೆ ವೃತ್ತ, ಗುಲಬರ್ಗಾ.

ABSTRACT (ಘೋಷ್ವಾರೆ)

2009–10 ನೇ ಸಾಲಿನ ಮಾರ್ಚ – 2010 ರ ಅಂತ್ಯಕ್ಕೆ ಅನುದಾನ ವೆಚ್ಚದ ವಿವರಣಾ ಪಟ್ಟಿ

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಗುಲಬರ್ಗಾ ವೃತ್ತ : ಗುಲಬರ್ಗಾ

ಕ್ರ. ಸಂ.	ಲೆಕ್ಕ ಶೀರ್ಷಿಕೆ	ಲೆಕ್ಕ ಶೀರ್ಷಿಕೆ 2009–10 ನೇ ಸಾಲಿನ ಅನುದಾನ	2009–10 ನೇ ಸಾಲಿನ ಒಟ್ಟು ವೆಚ್ಚ
	5054 – ಬಂಡವಾಳ ಮತ್ತು ವೆಚ್ಚ ರಸ್ತೆ ಮತ್ತು ಸೇತುವೆ ನಿರ್ಮಾಣ		
	ಲೋ.ಇ.ವಿಭಾಗ ಗುಲಬರ್ಗಾ	390.82	394.63
	ಲೋ.ಇ.ವಿಭಾಗ ಯಾದಗಿರ	280.75	447.52
	ಲೋ.ಇ.ವಿಭಾಗ ಬೀದರ	619.68	926.79
	ಒಟ್ಟು	**1291.25**	**1768.94**
	5054 ನಬಾರ್ಡ ರಸ್ತೆ ಕಾಮಗಾರಿಗಳು		
	ಲೋ.ಇ.ವಿಭಾಗ ಗುಲಬರ್ಗಾ	835.24	906.28
	ಲೋ.ಇ.ವಿಭಾಗ ಯಾದಗಿರ	496.60	790.77
	ಲೋ.ಇ.ವಿಭಾಗ ಬೀದರ	741.50	358.29
	ಒಟ್ಟು	**2073.34**	**2055.34**
	5054 ನಬಾರ್ಡ ಸೇತುವೆ ಕಾಮಗಾರಿಗಳು		
	ಲೋ.ಇ.ವಿಭಾಗ ಗುಲಬರ್ಗಾ	0.00	0.00
	ಲೋ.ಇ.ವಿಭಾಗ ಯಾದಗಿರ	0.00	93.46
	ಲೋ.ಇ.ವಿಭಾಗ ಬೀದರ	0.00	0.00
	ಒಟ್ಟು	**0.00**	**93.46**
	ಒಟ್ಟು 5054 ನಬಾರ್ಡ ರಸ್ತೆ ಮತ್ತು ಸೇತುವೆ		
	ಲೋ.ಇ.ವಿಭಾಗ ಗುಲಬರ್ಗಾ	835.24	1300.91
	ಲೋ.ಇ.ವಿಭಾಗ ಯಾದಗಿರ	496.60	1331.75
	ಲೋ.ಇ.ವಿಭಾಗ ಬೀದರ	741.50	1285.08
	ಒಟ್ಟು	**2073.34**	**3917.74**
	ಸಿ.ಆರ್.ಎಫ್. ಕಾಮಗಾರಿಗಳು		
	ಲೋ.ಇ.ವಿಭಾಗ ಗುಲಬರ್ಗಾ	0.00	82.96

ಕ್ರ. ಸಂ.	ಲೆಕ್ಕ ಶೀರ್ಷಿಕೆ	ಲೆಕ್ಕ ಶೀರ್ಷಿಕೆ 2009-10 ನೇ ಸಾಲಿನ ಅನುದಾನ	2009-10 ನೇ ಸಾಲಿನ ಒಟ್ಟು ವೆಚ್ಚ
	ಲೋ.ಇ.ವಿಭಾಗ ಯಾದಗಿರ	0.00	85.15
	ಲೋ.ಇ.ವಿಭಾಗ ಬೀದರ	0.00	45.55
	ಒಟ್ಟು	**0.00**	**213.66**
	5054 ನಂಜುಂಡಪ್ಪ ವರದಿ		
	ಲೋ.ಇ.ವಿಭಾಗ ಗುಲಬರ್ಗಾ	1894.79	631.70
	ಲೋ.ಇ.ವಿಭಾಗ ಯಾದಗಿರ	1963.29	414.18
	ಲೋ.ಇ.ವಿಭಾಗ ಬೀದರ	1358.33	433.35
	ಒಟ್ಟು	**5216.41**	**1479.23**
	ಒಟ್ಟು 5054 ಎಸ್.ಸಿ.ಎಸ್.ಪಿ.		
	ಲೋ.ಇ.ವಿಭಾಗ ಗುಲಬರ್ಗಾ	497.02	125.75
	ಲೋ.ಇ.ವಿಭಾಗ ಯಾದಗಿರ	385.57	262.24
	ಲೋ.ಇ.ವಿಭಾಗ ಬೀದರ	362.88	414.46
	ಒಟ್ಟು	**1245.47**	**802.45**
	ಒಟ್ಟು 5054 ಟಿ.ಎಸ್.ಪಿ.		
	ಲೋ.ಇ.ವಿಭಾಗ ಗುಲಬರ್ಗಾ	25.63	66.37
	ಲೋ.ಇ.ವಿಭಾಗ ಯಾದಗಿರ	107.13	75.75
	ಲೋ.ಇ.ವಿಭಾಗ ಬೀದರ	156.91	127.15
	ಒಟ್ಟು	**289.67**	**269.27**
	5054 ಸುವರ್ಣ ರಸ್ತೆ		
	ಲೋ.ಇ.ವಿಭಾಗ ಗುಲಬರ್ಗಾ	364.56	134.98
	ಲೋ.ಇ.ವಿಭಾಗ ಯಾದಗಿರ	312.48	216.58
	ಲೋ.ಇ.ವಿಭಾಗ ಬೀದರ	312.50	324.51
	ಒಟ್ಟು	**989.54**	**676.07**
	5054 ಭೂಸ್ವಾಧೀನ ಪ್ರಕರಣಗಳು		
	ಲೋ.ಇ.ವಿಭಾಗ ಗುಲಬರ್ಗಾ	150.00	150.00
	ಲೋ.ಇ.ವಿಭಾಗ ಯಾದಗಿರ	0.00	0.00
	ಲೋ.ಇ.ವಿಭಾಗ ಬೀದರ	0.00	0.00
	ಒಟ್ಟು	**150.00**	**150.00**
	ಒಟ್ಟು 5054 ರಸ್ತೆ ಮತ್ತು ಸೇತುವೆ		

ಕ್ರ. ಸಂ.	ಲೆಕ್ಕ ಶೀರ್ಷಿಕೆ	ಲೆಕ್ಕ ಶೀರ್ಷಿಕೆ 2009–10 ನೇ ಸಾಲಿನ ಅನುದಾನ	2009–10 ನೇ ಸಾಲಿನ ಒಟ್ಟು ವೆಚ್ಚ
	ಲೋ.ಇ.ವಿಭಾಗ ಗುಲಬರ್ಗಾ	4008.06	2492.67
	ಲೋ.ಇ.ವಿಭಾಗ ಯಾದಗಿರ	3545.82	2385.65
	ಲೋ.ಇ.ವಿಭಾಗ ಬೀದರ	3551.80	2630.10
	ಒಟ್ಟು	**11105.68**	**7508.42**
	ಒಟ್ಟು 4059 ಲೋ.ಇ ಕಾಮಗಾರಿಗಳು		
	ಲೋ.ಇ.ವಿಭಾಗ ಗುಲಬರ್ಗಾ	2725.04	2008.89
	ಲೋ.ಇ.ವಿಭಾಗ ಯಾದಗಿರ	701.70	223.83
	ಲೋ.ಇ.ವಿಭಾಗ ಬೀದರ	562.87	171.63
	ಒಟ್ಟು	**3989.61**	**2404.35**
	ಒಟ್ಟು 4216 ಗೃಹ ನಿರ್ಮಾಣ		
	ಲೋ.ಇ.ವಿಭಾಗ ಗುಲಬರ್ಗಾ	41.87	165.92
	ಲೋ.ಇ.ವಿಭಾಗ ಯಾದಗಿರ	138.13	88.18
	ಲೋ.ಇ.ವಿಭಾಗ ಬೀದರ	37.74	51.26
	ಒಟ್ಟು	**217.74**	**305.36**
	ಒಟ್ಟು 4202 ಶಿಕ್ಷಣ		
	ಲೋ.ಇ.ವಿಭಾಗ ಗುಲಬರ್ಗಾ	176.99	167.40
	ಲೋ.ಇ.ವಿಭಾಗ ಯಾದಗಿರ	157.52	138.46
	ಲೋ.ಇ.ವಿಭಾಗ ಬೀದರ	31.05	22.70
	ಒಟ್ಟು	**365.56**	**328.56**
	4250 ಸಾಮಾಜಿಕ ಹಾಗೂ ಸಮುದಾಯ ಸೇವೆಗಳು		
	ಲೋ.ಇ.ವಿಭಾಗ ಗುಲಬರ್ಗಾ	20.00	6.87
	ಲೋ.ಇ.ವಿಭಾಗ ಯಾದಗಿರ	40.00	40.00
	ಲೋ.ಇ.ವಿಭಾಗ ಬೀದರ	0.00	0.00
	ಒಟ್ಟು	**60.00**	**46.87**
	ಒಟ್ಟು ಬೃಹತ ಕಟ್ಟಡಗಳು (ಯೋಜನೆ)		
	ಲೋ.ಇ.ವಿಭಾಗ ಗುಲಬರ್ಗಾ	2963.90	2349.08
	ಲೋ.ಇ.ವಿಭಾಗ ಯಾದಗಿರ	1037.35	490.47
	ಲೋ.ಇ.ವಿಭಾಗ ಬೀದರ	631.66	245.59
	ಒಟ್ಟು	**4632.91**	**3085.14**

ಕ್ರ. ಸಂ.	ಲೆಕ್ಕ ಶೀರ್ಷಿಕೆ	ಲೆಕ್ಕ ಶೀರ್ಷಿಕೆ 2009–10 ನೇ ಸಾಲಿನ ಅನುದಾನ	2009–10 ನೇ ಸಾಲಿನ ಒಟ್ಟು ವೆಚ್ಚ
	3054 ರಸ್ತೆ ಮತ್ತು ಸೇತುವೆಗಳು (ಯೋಜನೆ)		
	ಮು.ಮಂ.ಗ್ರಾ.ರ.ಅ. ಯೋಜನೆ		
	ಲೋ.ಇ.ವಿಭಾಗ ಗುಲಬರ್ಗಾ	117.56	368.76
	ಲೋ.ಇ.ವಿಭಾಗ ಯಾದಗಿರ	256.60	366.09
	ಲೋ.ಇ.ವಿಭಾಗ ಬೀದರ	120.75	265.45
	ಒಟ್ಟು	**494.91**	**1000.30**
	3054 ರಸ್ತೆ ಮತ್ತು ಸೇತುವೆಗಳು (ಯೋಜನೇತರ)		
	12ನೇ ಹಣಹಾಸು ಆಯೋಗ		
	ಲೋ.ಇ.ವಿಭಾಗ ಗುಲಬರ್ಗಾ	200.00	180.52
	ಲೋ.ಇ.ವಿಭಾಗ ಯಾದಗಿರ	453.00	272.48
	ಲೋ.ಇ.ವಿಭಾಗ ಬೀದರ	150.00	652.90
	ಒಟ್ಟು	**803.00**	**1105.90**
	ರಾಜ್ಯ ಹೆದ್ದಾರಿ ನಿರ್ವಹಣೆ		
	ಲೋ.ಇ.ವಿಭಾಗ ಗುಲಬರ್ಗಾ	322.75	229.91
	ಲೋ.ಇ.ವಿಭಾಗ ಯಾದಗಿರ	232.35	50.00
	ಲೋ.ಇ.ವಿಭಾಗ ಬೀದರ	245.85	157.40
	ಒಟ್ಟು	**800.95**	**437.31**
	ಸೇತುವೆಗಳ ನಿರ್ವಹಣೆ		
	ಲೋ.ಇ.ವಿಭಾಗ ಗುಲಬರ್ಗಾ	9.73	0.00
	ಲೋ.ಇ.ವಿಭಾಗ ಯಾದಗಿರ	12.98	0.00
	ಲೋ.ಇ.ವಿಭಾಗ ಬೀದರ	13.49	0.00
	ಒಟ್ಟು		**0.00**
	ಒಟ್ಟು 3054 ರಸ್ತೆ ಮತ್ತು ಸೇತುವೆಗಳು		
	ಲೋ.ಇ.ವಿಭಾಗ ಗುಲಬರ್ಗಾ	650.04	779.19
	ಲೋ.ಇ.ವಿಭಾಗ ಯಾದಗಿರ	954.93	688.57
	ಲೋ.ಇ.ವಿಭಾಗ ಬೀದರ	530.09	1075.75
	ಒಟ್ಟು	**2135.06**	**2543.51**
	ಯೋಜನೇತರ ಕಟ್ಟಡ ಶೀರ್ಷಿಕೆ		
	2059 ಲೋಇ ಕಾಮಗಾರಿ		
	ಲೋ.ಇ.ವಿಭಾಗ ಗುಲಬರ್ಗಾ	210.68	111.02

ಕ್ರ. ಸಂ.	ಲೆಕ್ಕ ಶೀರ್ಷಿಕೆ	ಲೆಕ್ಕ ಶೀರ್ಷಿಕೆ 2009–10 ನೇ ಸಾಲಿನ ಅನುದಾನ	2009–10 ನೇ ಸಾಲಿನ ಒಟ್ಟು ವೆಚ್ಚ
	ಲೋ.ಇ.ವಿಭಾಗ ಯಾದಗಿರ	132.66	65.72
	ಲೋ.ಇ.ವಿಭಾಗ ಬೀದರ	122.66	69.10
	ಒಟ್ಟು	**466.00**	**245.84**
	2059 ಲೋಇ 12ನೇ ಹಾಕಾಸು ಆಯೋಗ		
	ಲೋ.ಇ.ವಿಭಾಗ ಗುಲಬರ್ಗಾ	41.50	100.25
	ಲೋ.ಇ.ವಿಭಾಗ ಯಾದಗಿರ	18.80	18.77
	ಲೋ.ಇ.ವಿಭಾಗ ಬೀದರ	24.60	50.26
	ಒಟ್ಟು	**84.90**	**169.28**
	ಒಟ್ಟು 2059 ಲೋಇ ಕಾಮಗಾರಿ ಯೋಜನೇತರ		
	ಲೋ.ಇ.ವಿಭಾಗ ಗುಲಬರ್ಗಾ	252.18	211.27
	ಲೋ.ಇ.ವಿಭಾಗ ಯಾದಗಿರ	151.46	84.49
	ಲೋ.ಇ.ವಿಭಾಗ ಬೀದರ	147.26	119.36
	ಒಟ್ಟು	**550.90**	**415.12**
	ಒಟ್ಟು 2059 ಯಂತ್ರ ಮತ್ತು ಸಾಧನ ಸಾಮಾಗ್ರಿ		
	ಲೋ.ಇ.ವಿಭಾಗ ಗುಲಬರ್ಗಾ	7.92	0.00
	ಲೋ.ಇ.ವಿಭಾಗ ಯಾದಗಿರ	5.28	20.18
	ಲೋ.ಇ.ವಿಭಾಗ ಬೀದರ	5.28	0.00
	ಒಟ್ಟು	**18.48**	**20.18**
	ಒಟ್ಟು 2059 ಯೋಜನೇತರ		
	ಲೋ.ಇ.ವಿಭಾಗ ಗುಲಬರ್ಗಾ	260.10	211.27
	ಲೋ.ಇ.ವಿಭಾಗ ಯಾದಗಿರ	156.74	104.67
	ಲೋ.ಇ.ವಿಭಾಗ ಬೀದರ	152.54	119.36
	ಒಟ್ಟು	**569.38**	**435.30**
	ಒಟ್ಟು 2216 ಗೃಹ ನಿರ್ಮಾಣ ಯೋಜನೇತರ		
	ಲೋ.ಇ.ವಿಭಾಗ ಗುಲಬರ್ಗಾ	130.50	86.08
	ಲೋ.ಇ.ವಿಭಾಗ ಯಾದಗಿರ	64.00	23.27
	ಲೋ.ಇ.ವಿಭಾಗ ಬೀದರ	108.20	44.16
	ಒಟ್ಟು	**302.70**	**153.51**

ಕ್ರ. ಸಂ.	ಲೆಕ್ಕ ಶೀರ್ಷಿಕೆ	ಲೆಕ್ಕ ಶೀರ್ಷಿಕೆ 2009–10 ನೇ ಸಾಲಿನ ಅನುದಾನ	2009–10 ನೇ ಸಾಲಿನ ಒಟ್ಟು ವೆಚ್ಚ
	2203 ತಾಂತ್ರಿಕ ಶಿಕ್ಷಣ ಯೋಜನೇತರ		
	ಲೋ.ಇ.ವಿಭಾಗ ಗುಲಬರ್ಗಾ	0.00	0.00
	ಲೋ.ಇ.ವಿಭಾಗ ಯಾದಗಿರ	49.32	48.13
	ಲೋ.ಇ.ವಿಭಾಗ ಬೀದರ	0.00	0.00
	ಒಟ್ಟು	**49.32**	**48.13**
	ಒಟ್ಟು ಯೋಜನೇತರ ಕಟ್ಟಡಗಳು		
	ಲೋ.ಇ.ವಿಭಾಗ ಗುಲಬರ್ಗಾ	390.60	297.35
	ಲೋ.ಇ.ವಿಭಾಗ ಯಾದಗಿರ	270.06	176.07
	ಲೋ.ಇ.ವಿಭಾಗ ಬೀದರ	260.74	163.52
	ಒಟ್ಟು	**921.40**	**636.94**
	ಒಟ್ಟು ಸಂಪರ್ಕ ಮತ್ತು ಕಟ್ಟಡಗಳು		
	ಲೋ.ಇ.ವಿಭಾಗ ಗುಲಬರ್ಗಾ	8012.60	5918.29
	ಲೋ.ಇ.ವಿಭಾಗ ಯಾದಗಿರ	5808.16	3740.76
	ಲೋ.ಇ.ವಿಭಾಗ ಬೀದರ	4974.29	4114.96
	ಒಟ್ಟು	**18795.05**	**13774.01**
	ಲೆ.ಶಿ. 8443 ಕಾಮಗಾರಿಗಳು		
	ಠೇವಣಿ ವಂತಿಗೆ/ಮರುಪಾವತಿ ಕಾಮಗಾರಿಗಳು		
	ಲೋ.ಇ.ವಿಭಾಗ ಗುಲಬರ್ಗಾ	598.43	598.43
	ಲೋ.ಇ.ವಿಭಾಗ ಯಾದಗಿರ	2.98	2.98
	ಲೋ.ಇ.ವಿಭಾಗ ಬೀದರ	783.18	625.74
	ಒಟ್ಟು	**1384.59**	**1227.15**
	ಒಟ್ಟು ಲೋ.ಇ. ವೃತ್ತ : ಗುಲಬರ್ಗಾ		
	ಒಟ್ಟು ಲೋ.ಇ.ಯೋಜನೆ, ಯೋಜನೇತರ ಸೇರಿ		
	ಲೋ.ಇ.ವಿಭಾಗ ಗುಲಬರ್ಗಾ	8611.03	6516.72
	ಲೋ.ಇ.ವಿಭಾಗ ಯಾದಗಿರ	5811.14	3743.74
	ಲೋ.ಇ.ವಿಭಾಗ ಬೀದರ	5757.47	4740.70
	ಒಟ್ಟು	**20179.64**	**15001.16**

ಅಧೀಕ್ಷಕ ಅಭಿಯಂತರರು,
ಲೋಕೋಪಯೋಗಿ, ಬಂದರು ಮತ್ತು
ಒಳನಾಡು ಜಲಸಾರಿಗೆ ವೃತ್ತ, ಗುಲಬರ್ಗಾ.

ಪಿ.ಆರ್.1034

ತೋಟಗಾರಿಕೆ ಇಲಾಖೆ

ಅಧಿಸೂಚನೆ

ಸಂಖ್ಯೆ: ತೋಇ 91 ತೋಸೇಪ 2010, ಬೆಂಗಳೂರು, ದಿನಾಂಕ:31ನೇ ಮೇ, 2010

ಮಾಹಿತಿ ಹಕ್ಕು ಅಧಿನಿಯಮ 2005ರ (Central Act 22 of 2005) ಇದರ 4ನೇ ಕಲಂ ಅಡಿಯಲ್ಲಿ ಕರ್ನಾಟಕ ಸರ್ಕಾರದ ತೋಟಗಾರಿಕೆ ಇಲಾಖೆಯ ಸಚಿವಾಲಯಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಸಾರ್ವಜನಿಕ ತಿಳುವಳಿಕೆಗಾಗಿ ಈ ಕೆಳಕಂಡಂತೆ ಪ್ರಕಟಿಸಲಾಗಿದೆ.

2005ರ ಮಾಹಿತಿ ಹಕ್ಕು ಅಧಿನಿಯಮದ

ಕಲಂ 4(1) (ಬಿ) ರಡಿ ತೋಟಗಾರಿಕೆ ಇಲಾಖೆಯ ಸಚಿವಾಲಯ ಹಂತದ ಸೂಚನಾ ಪಟ್ಟಿ

ಕಲಂ 4(1) (ಬಿ) ರಡಿ (i) ತೋಟಗಾರಿಕೆ ಇಲಾಖೆಯ ಸಚಿವಾಲಯದ ಅಂಗ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳು

ಅಂಗರಚನೆ

ತೋಟಗಾರಿಕೆ ಸಚಿವರು

⇩

ಸರ್ಕಾರದ ಕಾರ್ಯದರ್ಶಿ, ತೋಟಗಾರಿಕೆ

⇩ ಸರ್ಕಾರದ ಉಪ ಕಾರ್ಯದರ್ಶಿ ತೋಟಗಾರಿಕೆ
- ⇩ ಸರ್ಕಾರದ ಅಧೀನ ಕಾರ್ಯದರ್ಶಿ ತೋಟಗಾರಿಕೆ
  - ⇩ ಶಾಖಾಧಿಕಾರಿ (ತೋಟಗಾರಿಕೆ)
  - ⇩ ಶಾಖಾಧಿಕಾರಿ (ಸ್ವೀಕೃತಿ ಮತ್ತು ರವಾನೆ)
  - ⇩ ತಾಂತ್ರಿಕ ಅಧಿಕಾರಿ

⇩ ಸರ್ಕಾರದ ಉಪ ಕಾರ್ಯದರ್ಶಿ (IFA) ಕೃಷಿ ಮತ್ತು ತೋಟಗಾರಿಕೆ ಇಲಾಖೆ (ಕಾನೂನು ಕೋಶ)
- ⇩ ಶಾಖಾಧಿಕಾರಿ (IFA:O & B)

⇩ ಸರ್ಕಾರದ ಉಪ ಕಾರ್ಯದರ್ಶಿ ಕೃಷಿ ಮತ್ತುತೋಟಗಾರಿಕೆ ಇಲಾಖೆ (ಕಾನೂನು ಕೋಶ)
- ⇩ ಸರ್ಕಾರದ ಅಧೀನ ಕಾರ್ಯದರ್ಶಿ ಕೃಷಿ ಮತ್ತು ತೋಟಗಾರಿಕೆ (Legal Cell)
  - ⇩ ಶಾಖಾಧಿಕಾರಿ

ಕಾರ್ಯ ಮತ್ತು ಕರ್ತವ್ಯಗಳು

ಕರ್ನಾಟಕ ರಾಜ್ಯದಲ್ಲಿ ಪರಿಣಾಮಕಾರಿ ಮತ್ತು ಉತ್ಪನ್ನಕಾರಕ ತೋಟಗಾರಿಕೆಯನ್ನು ಸಾಧಿಸುವುದೇ ಇಲಾಖೆಯ ಘನೋದ್ಧೇಶವಾಗಿದೆ. ಅದರಂತೆ ಇಲಾಖೆಯು ನಿರ್ದಿಷ್ಟ ಕಾರ್ಯಚಟುವಟಿಕೆಗಳನ್ನು ಹೊಂದಿದ್ದು, ಅವುಗಳಲ್ಲಿ ಪ್ರದೇಶ ವಿಸ್ತರಣೆ ಕಾರ್ಯಕ್ರಮ, ಅಧಿಕ ಇಳುವರಿ ನೀಡುವ ತಳಿಗಳ ಪ್ರಾತ್ಯಕ್ಷತೆಗಳನ್ನು ಏರ್ಪಡಿಸುವುದು, ತೋಟಗಾರಿಕೆ ಬೆಳೆಗಳ ಉತ್ಕೃಷ್ಟ ಗುಣಮಟ್ಟದ ಕಸಿ/ಸಸಿ ಗಿಡಗಳ ಉತ್ಪಾದನೆ, ರೈತರ ಮತ್ತು ರೈತ ಮಹಿಳೆಯರಿಗೆ ತರಬೇತಿ, ಪ್ರಚಾರ ಹಾಗೂ ತಾಂತ್ರಿಕತೆ ಚಟುವಟಿಕೆಗಳಾದ ಅಂಗಾಂಶ ಕೃಷಿ, ಸಾವಯವ ಕೃಷಿ, ಅಣಬೆ ಅಭಿವೃದ್ಧಿ, ಡಿ.ಎನ್.ಎ.ಫಿಂಗರ್ ಪ್ರಿಂಟಿಂಗ್, ನೀರು ಮತ್ತು ಮಣ್ಣು ವಿಶ್ಲೇಷಣೆ, ಸುಗಂಧ ಬೆಳೆಗಳು, ಔಷಧೀಯ ಹಾಗೂ ಪುಷ್ಪ ಬೆಳೆಗಳ ಉತ್ಪನ್ನಗಳು, ಸಂಸ್ಕರಣೆ ಮತ್ತು ಶೇಖರಣೆ ತರಬೇತಿ, ತೋಟಗಾರಿಕೆ ಬೆಳೆಗಳಿಗೆ ಮಾಲ್ಕಿ ಮೌಲ್ಯಮಾಪನ, ಇಲಾಖಾ ಅಧಿಕಾರಿ/ ನೌಕರರ ಸೇವಾ ವಿಷಯಗಳಿಗೆ ಸಂಬಂಧಪಟ್ಟಂತೆ ನಿರ್ಣಯ ಹಾಗೂ ಕ್ರಮಕೈಗೊಳ್ಳುವುದು.

ತೋಟಗಾರಿಕೆ ವಿಷಯಕ್ಕೆ ಸಂಬಂಧಪಟ್ಟಂತೆ ಸಚಿವಾಲಯದ ಕೆಳಮಟ್ಟದಲ್ಲಿ ತೋಟಗಾರಿಕೆ ನಿರ್ದೇಶನಾಲಯವು ಕಾರ್ಯನಿರ್ವಹಿಸುತ್ತಿದ್ದು ಅದರ ಆಡಳಿತ ಕೇಂದ್ರ ಕಛೇರಿಯು ಲಾಲ್‌ಬಾಗ್, ಬೆಂಗಳೂರಿನಲ್ಲಿರುತ್ತದೆ. ನಿರ್ದೇಶನಾಲಯದ ಅಧೀನ ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಕಛೇರಿಗಳು ಕಾರ್ಯನಿರ್ವಹಿಸುತ್ತಿರುತ್ತವೆ.

ಹಾಪ್‌ಕಾಮ್ಸ್, ತೋಟಗಾರಿಕೆ ಮಹಾ ಮಂಡಳ ಹಾಗೂ ದ್ರಾಕ್ಷಿ ಸಂಸ್ಕರಣೆ ಮತ್ತು ದ್ರಾಕ್ಷರಸ ಬೋರ್ಡ್ ಇವುಗಳು ತೋಟಗಾರಿಕೆ ಇಲಾಖೆಯ ಸ್ವಾಮ್ಯ ಸಂಸ್ಥೆಗಳಾಗಿರುತ್ತವೆ.

ಹಾಪ್‌ಕಾಮ್ಸ್: ಈ ಸಂಸ್ಥೆಯಲ್ಲಿ ಸದಸ್ಯತ್ವ ಹೊಂದಿದ ತೋಟಗಾರಿಕೆ ಬೆಳೆಗಾರರಿಂದ ತೋಟಗಾರಿಕೆ ಬೆಳೆಗಳನ್ನು ಪಡೆದು ಹಾಪ್‌ಕಾಮ್ಸ್ ಸಂಸ್ಥೆಯ ಮಳಿಗೆಗಳಲ್ಲಿ ಮಾರಾಟ ವಹಿವಾಟು ನಿರ್ವಹಿಸುತ್ತಿದೆ.

ತೋಟಗಾರಿಕೆ ಮಹಾ ಮಂಡಳಿ: (ಜಿಲ್ಲಾವಾರು ಹಾಪ್‌ಕಾಮ್ಸ್ ಮಳಿಗೆಗಳು) ಈ ಮಹಾಮಂಡಳದ ಅಡಿ ವಿವಿಧ ಜಿಲ್ಲೆಗಳ ಅಡಿಯಲ್ಲಿ ತಾಲ್ಲೂಕು ಮಟ್ಟದಲ್ಲಿ ನೋಂದಾಯಿತ ತೋಟಗಾರಿಕೆ ಬೆಳೆಗಾರರಿಂದ ತೋಟಗಾರಿಕೆ ಬೆಳೆಗಳನ್ನು ಪಡೆದು ಮಾರಾಟ ವಹಿವಾಟು ನಿರ್ವಹಿಸುತ್ತಿದೆ.

ದ್ರಾಕ್ಷಿ ಸಂಸ್ಕರಣೆ ಮತ್ತು ದ್ರಾಕ್ಷರಸ ಬೋರ್ಡ್: ಕರ್ನಾಟಕ ರಾಜ್ಯದ ರೈತರ ಹಿತದೃಷ್ಟಿಯಿಂದ ವಿವಿಧ ದ್ರಾಕ್ಷಿ ಬೆಳೆ ಬೇಸಾಯ ಪ್ರೋತ್ಸಾಹಿಸುವುದು ಹಾಗೂ ದ್ರಾಕ್ಷಾರಸ ಉತ್ಪಾದನೆ ಮತ್ತು ಮಾರುಕಟ್ಟೆಯನ್ನು ಅಭಿವೃದ್ಧಿಪಡಿಸುವುದು ಈ ಸಂಸ್ಥೆಯ ಮುಖ್ಯ ಧ್ಯೇಯವಾಗಿರುತ್ತದೆ. ಈ ಮಂಡಳಿಯಡಿ:

1) ದ್ರಾಕ್ಷಿ ಬೆಳೆ ಬೇಸಾಯದ ಗುಣಮಟ್ಟ ಮತ್ತು ನಿಯಂತ್ರಣ

2) ದ್ರಾಕ್ಷಾರಸ ಬೆಳೆಯ ಗುಣಮಟ್ಟದ ಮಾಪನ ಮತ್ತು ನಿಯಮಗಳನ್ನು ರೂಪಿಸಿ ಅನುಮೋದಿಸುವುದು.

3) ಲೇಬಲ್‌ಗಳಿಗೆ ಅನುಮೋದನೆ ನೀಡುವುದು.

4) ಕರ್ನಾಟಕದಲ್ಲಿ ದ್ರಾಕ್ಷಾರಸ ಬೆಳೆ, ಬೇಸಾಯ ಮತ್ತು ಉದ್ಯಮಕ್ಕೆ ಅನುಕೂಲವಾಗುವಂತಹ ಕಾರ್ಯಕ್ರಮಗಳನ್ನು ಕೈಗೊಳ್ಳುವುದು, ಅವುಗಳಲ್ಲಿ ಸಂಶೋಧನೆ, ಪ್ರದರ್ಶನಗಳು, ಜಾತ್ರೆಗಳು, ಪ್ರವಾಸಗಳು ಮತ್ತು ಭೇಟಿಗಳು, ಭಾರತ ಮತ್ತು ಹೊರದೇಶಗಳಲ್ಲಿ ದ್ರಾಕ್ಷಾರಸ ಮಾರಾಟ ಮತ್ತು ಮಾರುಕಟ್ಟೆಗೆ ಯೋಜನೆಗಳನ್ನು ರೂಪಿಸುವುದು.

ಕಲಂ 4(1) (ಬಿ) (ii) ರಡಿ ತೋಟಗಾರಿಕೆ ಇಲಾಖೆಯ ಸಚಿವಾಲಯದ ಅಧಿಕಾರಿಗಳು ಮತ್ತು ನೌಕರರ ವಿವರ ಹಾಗೂ ಕರ್ತವ್ಯಗಳು

ಕ್ರ. ಸಂ.	ಹುದ್ದೆ ಹಾಗೂ ಹೆಸರು ಕಛೇರಿ ವಿಳಾಸ	ವಹಿಸಲಾಗಿರುವ ಕರ್ತವ್ಯಗಳು
1.	ತೋಟಗಾರಿಕೆ ಸಚಿವರು	ತೋಟಗಾರಿಕೆ ಇಲಾಖೆಯ ಅಭಿವೃದ್ಧಿಗೆ ಸಂಬಂಧಪಟ್ಟ ವಿಷಯಗಳು
2.	ತೋಟಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ	ತೋಟಗಾರಿಕೆ ಸಚಿವಾಲಯದಿಂದ ಬಂದಂತಹ ಕಡತ/ವರದಿ/ಮಾಹಿತಿಗಳನ್ನು ಮುಂದಿನ ಕ್ರಮಕ್ಕಾಗಿ ಸಚಿವರ ಗಮನಕ್ಕೆ ತರುವುದು ಹಾಗೂ ನೇರವಾಗಿ ಸಚಿವರಿಂದ ಸ್ವೀಕೃತಗೊಂಡಿರುವ ಪತ್ರಗಳ ಮೇಲೆ ಕ್ರಮ ಕೈಗೊಳ್ಳುವಂತೆ ಅಧೀನ ಕಛೇರಿಗಳಿಗೆ ಕಳುಹಿಸುವುದು.
3.	ಸರ್ಕಾರದ ಕಾರ್ಯದರ್ಶಿ ಕೊಠಡಿ ಸಂ:405, 4ನೇ ಮಹಡಿ, 2ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು–560 001	ತೋಟಗಾರಿಕೆ ಸಚಿವರಿಂದ ಸ್ವೀಕೃತಗೊಂಡಂತಹ ಟಪಾಲುಗಳು ಹಾಗೂ ಕಡತಗಳಲ್ಲಿ ನಿರ್ದೇಶಿಸಲ್ಪಟ್ಟಿರುವ ವಿಷಯಗಳನ್ನು ಕಾರ್ಯರೂಪಕ್ಕೆ ತರುವುದು, ಇಲಾಖಾ ಸಚಿವರಿಗೆ ಆರ್ಥಿಕ ಮತ್ತು ಆಡಳಿತ ವಿಷಯಕ್ಕೆ ಸಂಬಂಧಿಸಿದಂತೆ ವಿಷದಪಡಿಸುವುದು, ಕಾಲಕ್ಕನುಗುಣವಾಗಿ ಇಲಾಖಾ ಅಭಿವೃದ್ಧಿಗೆ ಸಂಬಂಧಿಸಿದಂತೆ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಹಾಗೂ CAG ವರದಿಗೆ ಸಂಬಂಧಿಸಿದಂತಹ ವಿಷಯಗಳು, ತೋಟಗಾರಿಕೆ ಇಲಾಖೆಯ ಎ ಮತ್ತು ಬಿ ಸಮೂಹದ ಅಧಿಕಾರಿಗಳ ಸೇವಾ ವಿಷಯಕ್ಕೆ ಸಂಬಂಧಪಟ್ಟಂತೆ ಹಾಗೂ ಮಾಹಿತಿ ಹಕ್ಕು ಅಧಿನಿಯಮ ಕಲಂ 4(1)(ಬಿ)ರಡಿ ಉಪ–ಖಂಡ (iii),(iv),(v)ರಲ್ಲಿ ಸೂಚಿಸಿರುವ ದಸ್ತಾವೇಜುಗಳನ್ನೊಳಗೊಂಡಂತೆ ಕ್ರಮ ವಹಿಸುವುದು.
4.	ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಛೇರಿ, ಕೊಠಡಿ ಸಂ:419, 4ನೇ ಮಹಡಿ, 2ನೇ ಹಂತ,	**ಅ) ಆಪ್ತ ಕಾರ್ಯದರ್ಶಿ:** ತೋಟಗಾರಿಕೆ ಸಚಿವಾಲಯದ ಅಧೀನ ಬಂದಂತಹ ಕಡತ/ ವರದಿ/ ಮಾಹಿತಿಗಳನ್ನು ಮುಂದಿನ ಕ್ರಮಕ್ಕಾಗಿ ಕಾರ್ಯದರ್ಶಿಯವರ ಗಮನಕ್ಕೆ ತರುವುದು ಹಾಗೂ ನೇರವಾಗಿ ಕಾರ್ಯದರ್ಶಿಯವರಿಂದ ಸ್ವೀಕೃತಗೊಂಡಿರುವ ಪತ್ರಗಳ ಮೇಲೆ ಕ್ರಮ ಕೈಗೊಳ್ಳುವಂತೆ ಅಧೀನ

ಕ್ರ. ಸಂ.	ಹುದ್ದೆ ಹಾಗೂ ಹೆಸರು ಕಛೇರಿ ವಿಳಾಸ	ವಹಿಸಲಾಗಿರುವ ಕರ್ತವ್ಯಗಳು
	ಬಹುಮಹಡಿ ಕಟ್ಟಡ, ಬೆಂಗಳೂರು–560 001 ಅ) ಆಪ್ತ ಕಾರ್ಯದರ್ಶಿ ಆ) ಶೀಘ್ರಲಿಪಿಗಾರರು ಇ) ಕಿರಿಯ ಸಹಾಯಕರು ಈ) ದಲಾಯತ್	ಕಛೇರಿಗಳಿಗೆ ಕಳುಹಿಸುವುದು, ಕಾರ್ಯದರ್ಶಿಯವರಿಂದ ಸೂಚಿಸಲ್ಪಟ್ಟ ಇತರೆ ಕಛೇರಿ ಕೆಲಸಗಳು, ಸಚಿವಾಲಯದ ಕೈಪಿಡಿಯಲ್ಲಿ ಈ ಹುದ್ದೆಗೆ ಸೂಚಿಸಿರುವಂತೆ ಇನ್ನಿತರೆ ಕೆಲಸಗಳು. **ಆ) ಶೀಘ್ರಲಿಪಿಗಾರರು:** ಕಾರ್ಯದರ್ಶಿಯವರು ನೀಡುವ ಉಖ್ತಲೇಖನವನ್ನು ತೆಗೆದುಕೊಳ್ಳುವುದು ಹಾಗೂ ಕಾರ್ಯದರ್ಶಿಯವರು ಸೂಚಿಸಲ್ಪಟ್ಟ ಇತರೆ ಕೆಲಸಗಳು, ಸಚಿವಾಲಯದ ಕೈಪಿಡಿಯಲ್ಲಿ ಈ ಹುದ್ದೆಗೆ ಸೂಚಿಸಿರುವಂತೆ ಇನ್ನಿತರೆ ಕೆಲಸಗಳು. **ಇ) ಕಿರಿಯ ಸಹಾಯಕರು:** ಕಛೇರಿಯ ಕಡತ ಮತ್ತು ಪತ್ರಗಳನ್ನು ಗಣಕಯಂತ್ರದ ಮುಖಾಂತರ ಚಲನ ವಲನ ನಿರ್ವಹಣೆ, ಕಛೇರಿ ಮುಖ್ಯಸ್ಥರು ಸೂಚಿಸುವ ಇನ್ನಿತರೆ ಕೆಲಸಗಳು ಹಾಗೂ ಸಚಿವಾಲಯದ ಕೈಪಿಡಿಯಲ್ಲಿ ಈ ಹುದ್ದೆಗೆ ಸೂಚಿಸಿರುವಂತೆ ಇನ್ನಿತರೆ ಕೆಲಸಗಳು. **ಈ) ದಲಾಯತ್:** ಕಛೇರಿಯ ಮುಖ್ಯಸ್ಥರು ಸೂಚಿಸಿರುವ ಕೆಲಸಗಳು ಹಾಗೂ ಸಚಿವಾಲಯದ ಕೈಪಿಡಿಯಲ್ಲಿ ಈ ಹುದ್ದೆಗೆ ಸೂಚಿಸಿರುವಂತೆ ಇನ್ನಿತರೆ ಕೆಲಸಗಳು.
5.	ಸರ್ಕಾರದ ಉಪ ಕಾರ್ಯದರ್ಶಿ, ಕೊಠಡಿ ಸಂ:427, 4ನೇ ಮಹಡಿ, 2ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು–560 001	ತೋಟಗಾರಿಕೆ ಕಾರ್ಯದರ್ಶಿಯವರಿಂದ ಸ್ವೀಕೃತಗೊಂಡಂತಹ ಟಪಾಲುಗಳು ಹಾಗೂ ಕಡತಗಳಲ್ಲಿ ನಿರ್ದೇಶಿಸಲ್ಪಟ್ಟಿರುವ ವಿಷಯಗಳನ್ನು ಕಾರ್ಯರೂಪಕ್ಕೆ ತರುವುದು, ಆರ್ಥಿಕ ಮತ್ತು ಆಡಳಿತ ವಿಷಯಕ್ಕೆ ಸಂಬಂಧಿಸಿದಂತೆ ವಿಷದಪಡಿಸುವುದು, ಕಾಲಕ್ಕನುಗುಣವಾಗಿ ಇಲಾಖಾ ಅಭಿವೃದ್ಧಿಗೆ ಸಂಬಂಧಿಸಿದಂತೆ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಹಾಗೂ CAG ವರದಿಗೆ ಸಂಬಂಧಿಸಿದಂತಹ ವಿಷಯಗಳು, ತೋಟಗಾರಿಕೆ ಇಲಾಖೆಯ ಅಧಿಕಾರಿ/ನೌಕರರುಗಳ ಸೇವಾ ವಿಷಯಕ್ಕೆ ಸಂಬಂಧಪಟ್ಟಂತೆ ನಿರ್ಣಯಗಳು, ಸಚಿವಾಲಯದ ಕೈಪಿಡಿಯಲ್ಲಿ ಈ ಹುದ್ದೆಗೆ ಸೂಚಿಸಿರುವಂತೆ ಕ್ರಮ ಕೈಗೊಳ್ಳುವುದು ಹಾಗೂ ಮಾಹಿತಿ ಹಕ್ಕು ಅಧಿನಿಯಮ ಕಲಂ 4(1)(ಬಿ)ರಡಿ ಉಪ–ಖಂಡ (iii),(iv),(v)ರಲ್ಲಿ ಸೂಚಿಸಿರುವ ದಸ್ತಾವೇಜುಗಳನ್ನೊಳಗೊಂಡಂತೆ ಕ್ರಮ ವಹಿಸುವುದು.
6.	ಸರ್ಕಾರದ ಉಪ ಕಾರ್ಯದರ್ಶಿ ಯವರ ಆಪ್ತ ಸಹಾಯಕರು, ಕೊಠಡಿ ಸಂ:426, 4ನೇ ಮಹಡಿ, 2ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು–560 001	**ಅ) ಆಪ್ತ ಸಹಾಯಕರು:** ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟಂತಹ ಕಡತ/ ವರದಿ/ಮಾಹಿತಿಗಳನ್ನು ಮುಂದಿನ ಕ್ರಮಕ್ಕಾಗಿ ಉಪ ಕಾರ್ಯದರ್ಶಿಯವರ ಗಮನಕ್ಕೆ ತರುವುದು ಹಾಗೂ ನೇರವಾಗಿ ಉಪ ಕಾರ್ಯದರ್ಶಿಯವರಿಂದ ಸ್ವೀಕೃತ ಗೊಂಡಿರುವ ಪತ್ರಗಳ ಮೇಲೆ ಕ್ರಮ ಕೈಗೊಳ್ಳುವಂತೆ ಅಧೀನ ಕಛೇರಿಗಳಿಗೆ ಕಳುಹಿಸುವುದು, ಉಪ ಕಾರ್ಯದರ್ಶಿಯವರಿಂದ ಸೂಚಿಸಲ್ಪಟ್ಟ ಇತರೆ ಕಛೇರಿ ಕೆಲಸಗಳು ಹಾಗೂ ಉಕ್ತಲೇಖನವನ್ನು ತೆಗೆದುಕೊಳ್ಳುವುದು, ಸಚಿವಾಲಯದ ಕೈಪಿಡಿಯಲ್ಲಿ ಈ ಹುದ್ದೆಗೆ ಸೂಚಿಸಿರುವ ಇನ್ನಿತರೆ ಕೆಲಸಗಳು.

ಕ್ರ. ಸಂ.	ಹುದ್ದೆ ಹಾಗೂ ಹೆಸರು ಕಛೇರಿ ವಿಳಾಸ	ವಹಿಸಲಾಗಿರುವ ಕರ್ತವ್ಯಗಳು
	ಅ) ಆಪ್ತ ಸಹಾಯಕರು ಆ) ಕಿರಿಯ ಸಹಾಯಕರು ಇ) ದಲಾಯತ್	**ಆ) ಕಿರಿಯ ಸಹಾಯಕರು:** ಕಛೇರಿಯ ಕಡತ ಮತ್ತು ಪತ್ರಗಳನ್ನು ಗಣಕಯಂತ್ರದ ಮುಖಾಂತರ ಚಲನ ವಲನ ನಿರ್ವಹಣೆ, ಕಛೇರಿ ಮುಖ್ಯಸ್ಥರು ಸೂಚಿಸುವ ಇನ್ನಿತರೆ ಕೆಲಸಗಳು ಹಾಗೂ ಸಚಿವಾಲಯದ ಕೈಪಿಡಿಯಲ್ಲಿ ಈ ಹುದ್ದೆಗೆ ಸೂಚಿಸಿರುವಂತೆ ಇನ್ನಿತರೆ ಕೆಲಸಗಳು. **ಇ) ದಲಾಯತ್:** ಕಛೇರಿಯ ಮುಖ್ಯಸ್ಥರು ಸೂಚಿಸಿರುವ ಕೆಲಸಗಳು ಹಾಗೂ ಸಚಿವಾಲಯದ ಕೈಪಿಡಿಯಲ್ಲಿ ಈ ಹುದ್ದೆಗೆ ಸೂಚಿಸಿರುವಂತೆ ಇನ್ನಿತರೆ ಕೆಲಸಗಳು.
7.	ಸರ್ಕಾರದ ಅಧೀನ ಕಾರ್ಯದರ್ಶಿ, ಕೊಠಡಿ ಸಂ:422, 4ನೇ ಮಹಡಿ, 2ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು–560 001	ಸರ್ಕಾರದ ಕಾರ್ಯದರ್ಶಿ ಹಾಗೂ ಉಪ ಕಾರ್ಯದರ್ಶಿಗಳು ನೀಡಿದಂತಹ ನಿರ್ದೇಶನಗಳನ್ವಯ ಕ್ರಮ ಕೈಗೊಳ್ಳುವುದು. ಹಾಗೂ ತೋಟಗಾರಿಕೆ ನಿರ್ದೇಶನಾಲಯದಿಂದ ಬರುವಂತಹ ಪ್ರಸ್ತಾವನೆಗಳಿಗೆ ಮುಂದಿನ ಆದೇಶ ಕೋರಿ ಉನ್ನತ ಅಧಿಕಾರಿಗಳಿಗೆ ಸಲ್ಲಿಸುವುದು. ಸಚಿವಾಲಯದ ಕೈಪಿಡಿಯಲ್ಲಿ ಈ ಹುದ್ದೆಗೆ ಸೂಚಿಸಿರುವಂತೆ ಕ್ರಮ ಕೈಗೊಳ್ಳುವುದು ಹಾಗೂ ಮಾಹಿತಿ ಹಕ್ಕು ಅಧಿನಿಯಮ ಕಲಂ 4(1)(ಬಿ)ರಡಿ ಉಪ–ಖಂಡ (iii),(iv),(v)ರಲ್ಲಿ ಸೂಚಿಸಿರುವ ದಸ್ತಾವೇಜುಗಳನ್ನೊಳಗೊಂಡಂತೆ ಕ್ರಮ ವಹಿಸುವುದು.
8.	ಸರ್ಕಾರದ ಅಧೀನ ಕಾರ್ಯದರ್ಶಿ ಯವರ ಆಪ್ತ ಸಹಾಯಕರು, ಕೊಠಡಿ ಸಂ:422, 4ನೇ ಮಹಡಿ, 2ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು–560 001	ಉಕ್ತಲೇಖನವನ್ನು ತೆಗೆದುಕೊಳ್ಳುವುದು, ಗಣಕ ಯಂತ್ರದಲ್ಲಿ ಪತ್ರ ಹಾಗೂ ಕಡತಗಳ ಚಲನವಲನ ನಿರ್ವಹಣೆ, ಸಚಿವಾಲಯದ ಕೈಪಿಡಿಯಲ್ಲಿ ಈ ಹುದ್ದೆಗೆ ಸೂಚಿಸಿರುವಂತೆ ಕೆಲಸಗಳು ಹಾಗೂ ಅಧೀನ ಕಾರ್ಯದರ್ಶಿಯವರಿಂದ ನಿರ್ದೇಶಿಸಲ್ಪಡುವ ಇತರೆ ಕೆಲಸಗಳು.
9.	ಶಾಖಾಧಿಕಾರಿ (ತೋಟಗಾರಿಕೆ) ಕೊಠಡಿ ಸಂ:422, 4ನೇ ಮಹಡಿ, 2ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು ಅ) ಹಿರಿಯ ಸಹಾಯಕರು	ಸರ್ಕಾರದ ಕಾರ್ಯದರ್ಶಿ ಹಾಗೂ ಉಪ ಕಾರ್ಯದರ್ಶಿ ಹಾಗೂ ಅಧೀನ ಕಾರ್ಯದರ್ಶಿಯವರು ನೀಡಿದಂತಹ ನಿರ್ದೇಶನಗಳನ್ವಯ ಕ್ರಮ ಕೈಗೊಳ್ಳುವುದು. ಹಾಗೂ ತೋಟಗಾರಿಕೆ ನಿರ್ದೇಶನಾಲಯದಿಂದ ಬರುವಂತಹ ಪ್ರಸ್ತಾವನೆಗಳಿಗೆ ಮುಂದಿನ ಆದೇಶ ಕೋರಿ ಮೇಲಾಧಿಕಾರಿಗಳಿಗೆ ಸಲ್ಲಿಸುವುದು. ಸಚಿವಾಲಯದ ಕೈಪಿಡಿಯಲ್ಲಿ ಈ ಹುದ್ದೆಗೆ ಸೂಚಿಸಿರುವಂತೆ ಕ್ರಮ ಕೈಗೊಳ್ಳುವುದು ಹಾಗೂ ಮಾಹಿತಿ ಹಕ್ಕು ಅಧಿನಿಯಮ ಕಲಂ 4(1)(ಬಿ)ರಡಿ ಉಪ–ಖಂಡ (iii),(iv),(v)ರಲ್ಲಿ ಸೂಚಿಸಿರುವ ದಸ್ತಾವೇಜುಗಳನ್ನೊಳಗೊಂಡಂತೆ ಕ್ರಮ ವಹಿಸುವುದು. **ಅ) ಹಿರಿಯ ಸಹಾಯಕರು:** ತೋಟಗಾರಿಕೆ ಇಲಾಖೆಯ ಎ ವೃಂದದ ಅಧಿಕಾರಿಗಳ ಸೇವಾ ವಿವರದ ನಿರ್ವಹಣೆ, ನ್ಯಾಯಾಲಯ ವಿಷಯಗಳು, ವಿಧಾನ ಪರಿಷತ್/ಸಭೆ ಪ್ರಶ್ನೆಗಳು, ಗಮನ ಸೆಳೆಯುವ ಸೂಚನೆಗಳು, ಭರವಸೆಗಳು, ಕಡತ ಚಲನವಲನ ಹಾಗೂ ಸಚಿವಾಲಯದ ಕೈಪಿಡಿಯಲ್ಲಿ ಈ ಹುದ್ದೆಗೆ ಸೂಚಿಸಿರುವಂತೆ ಕ್ರಮ

ಕ್ರ. ಸಂ.	ಹುದ್ದೆ ಹಾಗೂ ಹೆಸರು ಕಛೇರಿ ವಿಳಾಸ	ವಹಿಸಲಾಗಿರುವ ಕರ್ತವ್ಯಗಳು
	ಆ) ಸಹಾಯಕರು–1 ಇ) ಸಹಾಯಕರು–2 ಈ) ಕಿರಿಯ ಸಹಾಯಕರು ಉ) ದಲಾಯತ್	ಕೈಗೊಳ್ಳುವುದು ಹಾಗೂ ಮಾಹಿತಿ ಹಕ್ಕು ಅಧಿನಿಯಮ ಕಲಂ ಕಲಂ 4(1)(ಬಿ)ರಡಿ ಉಪ–ಖಂಡ (iii),(iv),(v)ರಲ್ಲಿ ಸೂಚಿಸಿರುವ ದಸ್ತಾವೇಜುಗಳನ್ನೊಳಗೊಂಡಂತೆ ಕ್ರಮ ವಹಿಸುವುದು, ಮೇಲಾಧಿಕಾರಿಗಳಿಂದ ಸೂಚಿಸಲ್ಪಡುವ ಇನ್ನಿತರೆ ಕೆಲಸಗಳು. **ಆ) ಸಹಾಯಕರು–1:** ತೋಟಗಾರಿಕೆ ಇಲಾಖೆಯ ಬಿ ವೃಂದದ ಅಧಿಕಾರಿಗಳ ಸೇವಾ ವಿವರದ ನಿರ್ವಹಣೆ, ನ್ಯಾಯಾಲಯ ವಿಷಯಗಳು, ಕಾರ್ಯನೀತಿ ವಿಷಯ, ಆಡಿಟ್ ವಿಷಯ, ಅರ್ಜಿ ಸಮಿತಿಯ ವಿಷಯ ಹಾಗೂ ಸಾಮಾನ್ಯ ವಿಷಯಗಳ ನಿರ್ವಹಣೆ ಮತ್ತು ಕಡತ ಚಲನವಲನ, ಸಚಿವಾಲಯದ ಕೈಪಿಡಿಯಲ್ಲಿ ಈ ಹುದ್ದೆಗೆ ಸೂಚಿಸಿರುವಂತೆ ಕ್ರಮ ಕೈಗೊಳ್ಳುವುದು ಹಾಗೂ ಮಾಹಿತಿ ಹಕ್ಕು ಅಧಿನಿಯಮ ಕಲಂ ಕಲಂ 4(1)(ಬಿ)ರಡಿ ಉಪ–ಖಂಡ (iii),(iv),(v)ರಲ್ಲಿ ಸೂಚಿಸಿರುವ ದಸ್ತಾವೇಜುಗಳನ್ನೊಳಗೊಂಡಂತೆ ಕ್ರಮ ವಹಿಸುವುದು, ಮೇಲಾಧಿಕಾರಿಗಳಿಂದ ಸೂಚಿಸಲ್ಪಡುವ ಇನ್ನಿತರೆ ಕೆಲಸಗಳು. **ಆ) ಸಹಾಯಕರು–2:** ತೋಟಗಾರಿಕೆ ಇಲಾಖೆಯ ಬಿ ವೃಂದದ ಅಧಿಕಾರಿಗಳು ಹಾಗೂ ಲಿಪಿಕ ವೃಂದದ ಅಧಿಕಾರಿ/ನೌಕರರ ಸೇವಾ ವಿಷಯಗಳು, ನ್ಯಾಯಾಲಯ ವಿಷಯಗಳು ಕಡತ ಚಲನವಲನ, ಸಚಿವಾಲಯದ ಕೈಪಿಡಿಯಲ್ಲಿ ಈ ಹುದ್ದೆಗೆ ಸೂಚಿಸಿರುವಂತೆ ಕ್ರಮ ಕೈಗೊಳ್ಳುವುದು ಹಾಗೂ ಮಾಹಿತಿ ಹಕ್ಕು ಅಧಿನಿಯಮ ಕಲಂ ಕಲಂ 4(1)(ಬಿ)ರಡಿ ಉಪ–ಖಂಡ (iii),(iv),(v)ರಲ್ಲಿ ಸೂಚಿಸಿರುವ ದಸ್ತಾವೇಜುಗಳನ್ನೊಳಗೊಂಡಂತೆ ಕ್ರಮ ವಹಿಸುವುದು, ಮೇಲಾಧಿಕಾರಿಗಳಿಂದ ಸೂಚಿಸಲ್ಪಡುವ ಇನ್ನಿತರೆ ಕೆಲಸಗಳು. **ಆ) ಕಿರಿಯ ಸಹಾಯಕರು:** ಕಛೇರಿಯ ಕಡತ ಮತ್ತು ಪತ್ರಗಳನ್ನು ಗಣಕಯಂತ್ರದ ಮುಖಾಂತರ ಚಲನ ವಲನ ನಿರ್ವಹಣೆ, ಕಛೇರಿ ಮುಖ್ಯಸ್ಥರು ಸೂಚಿಸುವ ಇನ್ನಿತರೆ ಕೆಲಸಗಳು ಹಾಗೂ ಸಚಿವಾಲಯದ ಕೈಪಿಡಿಯಲ್ಲಿ ಈ ಹುದ್ದೆಗೆ ಸೂಚಿಸಿರುವಂತೆ ಇನ್ನಿತರೆ ಕೆಲಸಗಳು. **ಇ) ದಲಾಯತ್:** ಕಛೇರಿಯ ಮುಖ್ಯಸ್ಥರು ಸೂಚಿಸಿರುವ ಕೆಲಸಗಳು ಹಾಗೂ ಸಚಿವಾಲಯದ ಕೈಪಿಡಿಯಲ್ಲಿ ಈ ಹುದ್ದೆಗೆ ಸೂಚಿಸಿರುವಂತೆ ಇನ್ನಿತರೆ ಕೆಲಸಗಳು.
10.	ಶಾಖಾಧಿಕಾರಿ (ಸ್ವೀಕೃತಿ ಮತ್ತು ರವಾನೆ) ಕೊಠಡಿ ಸಂ:426, 4ನೇ ಮಹಡಿ, 2ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು.	ಇಲಾಖೆಯ ಸ್ವೀಕೃತಿ ಮತ್ತು ರವಾನೆಗೆ ಸಂಬಂಧಿಸಿದ ವಿಷಯಗಳು. ಕಛೇರಿಗೆ ಅಗತ್ಯವಿರುವ ಲೇಖನ ಸಾಮಗ್ರಿ ಮತ್ತು ಸಲಕರಣೆಗಳ ಖರೀದಿಗೆ ಸಂಬಂಧಿಸಿದ ವಿಷಯಗಳು, ಇಲಾಖಾ ಸಮನ್ವಯ ವಿಷಯಗಳು. ಹಾಗೂ ಉಪ ಕಾರ್ಯದರ್ಶಿ/ಅಧೀನ ಕಾರ್ಯದರ್ಶಿಯವರು ನೀಡಿದಂತಹ ನಿರ್ದೇಶನಗಳನ್ವಯ ಕ್ರಮ ಕೈಗೊಳ್ಳುವುದು. ಸಚಿವಾಲಯದ ಕೈಪಿಡಿಯಲ್ಲಿ ಈ ಹುದ್ದೆಗೆ ಸೂಚಿಸಿರುವಂತೆ ಕ್ರಮ ಕೈಗೊಳ್ಳುವುದು ಹಾಗೂ ಮಾಹಿತಿ ಹಕ್ಕು

ಕ್ರ. ಸಂ.	ಹುದ್ದೆ ಹಾಗೂ ಹೆಸರು ಕಛೇರಿ ವಿಳಾಸ	ವಹಿಸಲಾಗಿರುವ ಕರ್ತವ್ಯಗಳು
